ಸಂಪುಟ 01 | ಸಂಚಿಕೆ 123 | ಗುರುವಾರ 09 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) Guru Dutt Birth Anniversary (ಗುರುದತ್ ಜನ್ಮದಿನ)
ಭಾರತೀಯ ಚಲನಚಿತ್ರರಂಗದ ಖ್ಯಾತ ನಟ, ನಿರ್ದೇಶಕ ಮತ್ತು ನಿರ್ಮಾಪಕರಾದ ಗುರುದತ್ ಅವರ ಜನ್ಮದಿನವನ್ನು ಸಿನಿಪ್ರೇಮಿಗಳು ಸ್ಮರಿಸುತ್ತಾರೆ.

2) Behdienkhlam Festival Meghalaya ರಾಜ್ಯದ ಜೈಂಟಿಯಾ ಸಮುದಾಯದ ಪ್ರಮುಖ ಸಾಂಪ್ರದಾಯಿಕ ಹಬ್ಬ. ಜುಲೈ ತಿಂಗಳಲ್ಲಿ ಆಚರಿಸಲಾಗುತ್ತದೆ; 2026ರಲ್ಲಿ ಇದರ ಆಚರಣೆ ಜುಲೈ 9ರ ಅವಧಿಯಲ್ಲಿದೆ.

3) Fashion Day
ಜಾಗತಿಕ ಮಟ್ಟದಲ್ಲಿ ಫ್ಯಾಷನ್ ಕ್ಷೇತ್ರದ ಸೃಜನಶೀಲತೆ ಮತ್ತು ವಿನ್ಯಾಸಗಳನ್ನು ಗೌರವಿಸುವ ದಿನವಾಗಿ ಕೆಲವರು ಆಚರಿಸುತ್ತಾರೆ.

4) National Sugar Cookie Day
ಮುಖ್ಯವಾಗಿ ಅಮೆರಿಕದಲ್ಲಿ ಆಚರಿಸಲಾಗುವ ವಿಶೇಷ ದಿನ.

## ಸುಭಾಷಿತ

ನೀನು ಏನನ್ನು ಕಳೆದುಕೊಂಡಿರುವೆಯೋ
ಅದಕ್ಕಿಂತ ಶ್ರೇಷ್ಠ ವಾದುದು ಪಡೆಯುವೆ.
ತಾಳ್ಮೆಯಿರಬೇಕಷ್ಟೆ

–ಬುದ್ಧ

# ಎಲ್ಲಾ ಸಮಸ್ಯೆ ನಿವಾರಣೆಗೂ ಒಂದೇ ಆ್ಯಪ್ ಮತ್ತು ಒಂದೇ ಸಹಾಯವಾಣಿ ಆರಂಭಿಸಲು ಜಿಬಿಎ ಸಿದ್ಧತೆ

❑ ನೈಜ್ಯ ದೇಸೆ ನ್ಯೂಸ್

ಬೆಂಗಳೂರು: ನಗರದ ನಾಗರಿಕ ಸೇವೆಗಳನ್ನು ಮತ್ತಷ್ಟು ಸುಲಭಗೊಳಿಸುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಏಕೀಕೃತ ಮೊಬೈಲ್ ಆ?ಯಪ್ ಹಾಗೂ ಒಂದೇ ಸಹಾಯವಾಣಿ ಸಂಖ್ಯೆಯನ್ನು ಆರಂಭಿಸಲು ಸಿದ್ಧತೆ ನಡೆಸಿದೆ.ಬೆಂಗಳೂರು ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ಈ ಕುರಿತು ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ.

ನಗರದಲ್ಲಿರುವ ವಿವಿಧ ಇಲಾಖೆಗಳ ಸೇವೆಗಳು ಮತ್ತು ಸಾರ್ವಜನಿಕರ ಕುಂದುಕೊರತೆಗಳನ್ನು ಒಂದೇ ವೇದಿಕೆಯಲ್ಲಿ ಸ್ವೀಕರಿಸಿ, ಸಂಬಂಧಿತ ಇಲಾಖೆಗೆ ತಲುಪಿಸಿ ತ್ವರಿತವಾಗಿ ಪರಿಹಾರ ಕಲ್ಪಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಈ ಯೋಜನೆಯಡಿ ಬೆಸ್ಕಾಂ, ಬೆಂಗಳೂರು




ಜಲಮಂಡಳಿ, ನಗರಪಾಲಿಕೆ, ಮೆಟ್ರೋ, ಪೊಲೀಸ್ ಇಲಾಖೆ, ಬಿಎಂಟಿಸಿ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ದೂರುಗಳನ್ನು ಒಂದೇ ಆ?ಯಪ್ ಹಾಗೂ ಒಂದೇ ಹೆಲ್ಪ್ ಲೈನ್ ಸಂಖ್ಯೆಯ ಮೂಲಕ ದಾಖಲಿಸಬಹುದಾಗಿದೆ.

ಪ್ರಸ್ತುತ ಪ್ರತಿಯೊಂದು ಇಲಾಖೆಗೆ ಪ್ರತ್ಯೇಕ ಸಹಾಯವಾಣಿ ಸಂಖ್ಯೆ ಇರುವುದರಿಂದ ಸಾರ್ವಜನಿಕರು ಗೊಂದಲಕ್ಕೀಡಾಗುತ್ತಿದ್ದಾರೆ. ಕೆಲವೊಮ್ಮೆ ತಪ್ಪು ಇಲಾಖೆಗೆ ಕರೆ ಮಾಡಿದರೆ ಮಾಹಿತಿ ಸಂಬಂಧಿತ ಇಲಾಖೆಗೆ ತಲುಪದೇ ಸಮಸ್ಯೆ ಪರಿಹಾರ ವಿಳಂಬವಾಗುತ್ತಿದೆ. ಈ ತೊಂದರೆಯನ್ನು ನಿವಾರಿಸಲು ಏಕೀಕೃತ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ.

ಇದಕ್ಕಾಗಿ ಜಿಬಿಎ ಕೇಂದ್ರ ಕಚೇರಿಯಲ್ಲಿ ಇಂಟಿಗ್ರೇಟೆಡ್ ಕಮಾಂಡ್ ಸೆಂಟರ್ ಸ್ಥಾಪಿಸಿ, ಅಲ್ಲಿಂದಲೇ ವಿವಿಧ ಇಲಾಖೆಗಳ ಸಹಾಯವಾಣಿ ಮತ್ತು ದೂರು ನಿರ್ವಹಣೆಯನ್ನು ನಡೆಸುವ ಯೋಜನೆ ರೂಪಿಸಲಾಗಿದೆ.ಈ ವ್ಯವಸ್ಥೆ ಜಾರಿಗೆ ಬಂದರೆ ಬೆಂಗಳೂರಿನ ನಾಗರಿಕರು ಒಂದೇ ಸಂಖ್ಯೆ ಅಥವಾ ಒಂದೇ ಆ?ಯಪ್ ಮೂಲಕ ತಮ್ಮ ಸಮಸ್ಯೆಗಳನ್ನು ದಾಖಲಿಸಿ, ವಿವಿಧ ಇಲಾಖೆಗಳ ಸೇವೆಯನ್ನು ಸುಲಭವಾಗಿ ಪಡೆಯುವಂತಾಗಲಿದೆ. ಸಾರ್ವಜನಿಕ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸುವ ಮೂಲಕ ಆಡಳಿತವನ್ನು ಇನ್ನಷ್ಟು ಜನಸ್ನೇಹಿಯಾಗಿಸುವುದು ಜಿಬಿಎ ಉದ್ದೇಶವಾಗಿದೆ.

## BLA–2 ಕಾರ್ಯಾಗಾರ: ಪಕ್ಷ ಸಂಘಟನೆಗೆ ಒತ್ತು

❑ ನೈಜ್ಯ ದೇಸೆ ನ್ಯೂಸ್

ಗಂಗಾವತಿ: ನಗರದ ರಾಯಲ್ ರಿಚ್ ಕೌಂಟಿಯಲ್ಲಿ ಕನಕಗಿರಿ ವಿಧಾನಸಭಾ ಕ್ಷೇತ್ರದ ಬಿಎಲ್‌ಎ–2 ಗಳ ಕಾರ್ಯಾಗಾರ ನಡೆಯಿತು. ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಮುಖಂಡರು, ಪಕ್ಷದ ಸಂಘಟನೆ ಬಲಪಡಿಸುವಲ್ಲಿ ಬೂತ್ ಮಟ್ಟದ ಕಾರ್ಯಕರ್ತರ ಪಾತ್ರ ಅತ್ಯಂತ ಪ್ರಮುಖವಾಗಿದೆ.

ಪ್ರತಿಯೊಬ್ಬ ಕಾರ್ಯಕರ್ತರು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವ ಮೂಲಕ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು ಎಂದು ಕರೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಮಂಡಲ ಅಧ್ಯಕ್ಷರಾದ ಮಂಜುನಾಥ ಮಸ್ಕಿ ಹಾಗೂ ಸನಕನಕಪ್ಪ ಚಲವಾದಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಹಾಗೂ ಮಾಜಿ ಜಿಲ್ಲಾಧ್ಯಕ್ಷರಾದ ಬಸವರಾಜ ದಾಡೇಸಗೂರ್, ಎಸ್‌ಐಆರ್ ಜಿಲ್ಲಾ ಸಂಚಾಲಕ ರಾಜು ಬಾಕಳೆ, ಜಿಲ್ಲಾ ಉಪಾಧ್ಯಕ್ಷರಾದ ಮನೋಹರ್ ಗೌಡ ಹೇರೂರ್, ವಿರೂಪಾಕ್ಷಪ್ಪ, ಸ್ವರಾಜ್ ವಕೀಲರು, ನಾಗರಾಜ್ ಬಿಲ್ಗಾರ್, ಶ್ರೀಮತಿ ಲಲಿತಾ ನಾಗರಾಜ್, ಶ್ರೀಮತಿ ರತ್ನಕುಮಾರಿ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ಪ್ರಮುಖರು, ಬೂತ್ ಅಧ್ಯಕ್ಷರು ಹಾಗೂ ಬಿಎಲ್‌ಎ–2 ಗಳು ಭಾಗವಹಿಸಿದ್ದರು.

## ಮಾನ್ವಿ ತಾಲೂಕ ಯುವ ದಲಿತ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಅಂಜನೇಯ್ಯ ಸುಂಕೇಶ್ವರ ಪದಗ್ರಹಣ

❑ ನೈಜ್ಯ ದೇಸೆ ನ್ಯೂಸ್

ಮಾನ್ವಿ: ಸಿಂದನೂರು ನಗರದ ಮಹಿಳಾ ಪದವಿ ಮಹಾವಿದ್ಯಾಲಯದಲ್ಲಿ ನಡೆದ ದಲಿತ ಸಾಹಿತ್ಯ ಪರಿಷತ್ ಜಿಲ್ಲಾ ಮತ್ತು ತಾಲೂಕು ಘಟಕಗಳ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಸನ್ಮಾನ ಸಮಾರಂಭವು ಯಶಸ್ವಿಯಾಗಿ ಜರುಗಿತು. ಮಾನ್ವಿ ತಾಲೂಕ ಯುವ ದಲಿತ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಆಂಜನೇಯ್ಯ ಸುಂಕೇಶ್ವರ ಪದಗ್ರಹಣ ಸ್ವೀಕರಿಸಿದರು.

ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ದಲಿತ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರಾದ ಅರ್ಜುನ್ ಗೋಳಸಂಗಿ ಅವರು ಮಾತನಾಡಿ ದೇಶದಲ್ಲಿ ಅಸ್ಪೃಶ್ಯತೆಯ ನಿರ್ಮೂಲನೆ ಮತ್ತು ಸಾಮಾಜಿಕ ಸಮಾನತೆ ಯ ಅಗತ್ಯತೆಯನ್ನು ಬಲವಾಗಿ ಪ್ರತಿಪಾದಿಸಿದರು. ಸ್ವಾತಂತ್ರ್ಯ ಬಂದು 80 ವರ್ಷ ಸನಿಹದಲ್ಲಿದ್ದರೂ




ಬದಲಾಗದ ವ್ಯವಸ್ಥೆ ಸೃಷ್ಟಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪದಾಧಿಕಾರಿಗಳಿಗೆ ಪದಗ್ರಹಣ ಮತ್ತು ಗೌರವ ಸನ್ಮಾನದ ಮೂಲಕ ಅಧಿಕಾರ ಹಸ್ತಾಂತರಿಸಿಲಾಯಿತು.

ಇದೇ ಸಂದರ್ಭದಲ್ಲಿ ಸಂಘಟನೆ ಹಾಗೂ ಸಮಾಜದ ಪ್ರಮುಖರಾದ ಸಿಂದನೂರಿನ ಹಿರಿಯ ಪತ್ರಕರ್ತ ಡಿ.ಎಸ್.ಕಂಬಳಿ, ರಾಮಣ್ಣ ಸಿಂದನೂರು, ಲಕ್ಷ್ಮಣ ಜಾನೇಕಲ್ ಸೇರಿದಂತೆ ಹಲವು ಗಣ್ಯರನ್ನು ಅತ್ಯಂತ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಎಚ್.ಎಫ್. ಸಂಂಯೋಜಕರು , ಕಲ್ಬುರ್ಗಿ ವಿಭಾಗ, ಹುಸೇನಪ್ಪ ಅಮರಪುರ ಜಿಲ್ಲಾಧ್ಯಕ್ಷರು ದಲಿತ ಸಾಹಿತ್ಯ ಪರಿಷತ್ ರಾಯಚೂರು, ರಾಘವೇಂದ್ರ ಚೌಡ್ಕಿ ಜಿಲ್ಲಾ ಉಪಾಧ್ಯಕ್ಷರು ದಲಿತ ಸಾಹಿತ್ಯ ಪರಿಷತ್ ರಾಯಚೂರು, ಸನ್ಮಾನಿತರಾದ ಕರಿಗೂಳಿ ಸಹಾಯಕ ಪ್ರಾಧ್ಯಾಪಕರು ಹಾಗೂ ಹಿರಿಯ ಚಿಂತಕರು ಗಂಗಾವತಿ, ತಾಲೂಕು ಪ್ರಮುಖ ಮುಖಂಡರು,ಅಮರೇಶ ವೆಂಕಟಾಪುರ, ಸುರೇಶ ಮಾಚನೂರು,ಸುಭಾಷ್ ಚಿಂಚರಕಿ ಪತ್ರಕರ್ತರು, ಮಲ್ಲಿಕಾರ್ಜುನ ಕಡರ್ಚು, ಚನ್ನಬಸಪ್ಪ ಯಲಘಟ್ಟ ಪತ್ರಕರ್ತರು, ಬಾಬು ಹಟ್ಟಿ ಹಾಗೂ ರಾಯಚೂರು ಜಿಲ್ಲೆಯ ವಿವಿಧ ತಾಲೂಕುಗಳಿಂದ ಆಗಮಿಸಿದ ನೂರಾರು ಸಾಹಿತ್ಯಾಸಕ್ತರು, ದಲಿತ ಸಂಘಟನೆಯ ಪದಾಧಿಕಾರಿಗಳು ಹಾಗೂ ಚಿಂತಕರು ದಲಿತ ಸಾಹಿತ್ಯ ಪರಿಷತ್ ಪ್ರಮುಖ ನಾಯಕರು, ಪದಾಧಿಕಾರಿಗಳು ಹಾಗೂ ವಿವಿಧ ಪಕ್ಷಗಳ ಮುಖಂಡರು ಭಾಗವಹಿಸಿದ್ದರು.

## ಆರಂಭಿಕ ಬಾಲ್ಯದ ಆರೈಕೆ ಮತ್ತು ಆರೋಗ್ಯ ಶಿಕ್ಷಣ ದಿನಾಚರಣೆ

❑ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ ರಾಯಚೂರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಂಧನೂರು ಆರೋಗ್ಯ ಮತ್ತು ಕ್ಷೇಮ ಮಂದಿರ ಗೌಡನ ಬಾವಿ ಇವರ ಸಂಯುಕ್ತ ಆಶ್ರಯದಲ್ಲಿ ಆರಂಭಿಕ ಬಾಲ್ಯದ ಆರೈಕೆ ಮತ್ತು ಆರೋಗ್ಯ ಶಿಕ್ಷಣ ದಿನಾಚರಣೆ ಕುರಿತು ಅಂಗನವಾಡಿ ಕೇಂದ್ರದಲ್ಲಿ ತಾಯಿಂದಿರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ತಾಯಿಂದಿರಿಗೆ ಆರೋಗ್ಯ ಆರೈಕೆ ಮತ್ತು ಪೋಷಣೆ ಕುರಿತು ಮಾತನಾಡಿದರು ಬಾಲ್ಯಾವಸ್ಥೆಯಲ್ಲಿ ಮಕ್ಕಳಿಗೆ ಬರಬಹುದಾದ ಖಾಯಿಲೆಗಳನ್ನು ತಡೆಯಬಹುದಾಗಿದೆ ಅದನ್ನು ತಡೆಗಟ್ಟಲು ಮಕ್ಕಳಿಗೆ ಬ್ಯಾಲ್ಯದಲ್ಲಿ ತಪ್ಪದೇ ಹಾಕಿಸಿ ಹಾಗೂ ಮಕ್ಕಳ ಬೆಳವಣಿಗೆ ಆರು ತಿಂಗಳ ತಪ್ಪದೇ ಎದೇ ಹಾಲು ಕೂಡಬೇಕು



ನಂತರದ ದಿನಗಳಲ್ಲಿ ಲಘುವಾದ ದ್ರವರೂಪದ ಆಹಾರ ಕೊಡಬೇಕು ಮಕ್ಕಳ ದೈಹಿಕ ಮಾನಸಿಕ ಆರೋಗ್ಯದ ಬೆಳವಣಿಗೆ ತಾಯಿಯ ಪ್ರೀತಿ ಮತ್ತು ಕಾಳಜಿ ಮಹತ್ವ ಪಡೆದಿದೆ ಎಂದರು.

ನಂತರ ಮಾತನಾಡಿದ ಸರಕಾರಿ ಪ್ರೌಢಶಾಲೆ ಮುಖ್ಯ ಗುರುಗಳಾದ ನಂದೀಶ ಎಚ್ ಅವರು ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳ ಆರೋಗ್ಯದ ಬಗ್ಗೆ ಬಾಲ್ಯಾವಸ್ಥೆಯಲ್ಲಿ ಜಾಗೃತಿ ವಹಿಸಬೇಕು ಮಕ್ಕಳ ಬಾಲ್ಯದಲ್ಲಿ ಬೆಳವಣಿಗೆ ಉತ್ತಮ ಪೌಷ್ಟಿಕ ಆಹಾರವನ್ನು ಕೊಡಬೇಕು ಮಕ್ಕಳು ಚಟುವಟಿಕೆಯಿಂದ ಅವರಿಗೆ ಅಕ್ಷರ ಜ್ಞಾನವನ್ನು ಮಾಡಿಸುವುದು ಮುಖ್ಯವಾಗಿದೆ ಎಂದರು.

ನಂತರ ಅಂಗನವಾಡಿ ಶಾಲಾ ಮಕ್ಕಳಿಂದ ಅಕ್ಷರ ದಾಸೋಹ ಕಾರ್ಯಕ್ರಮ ಹಾಗೂ ನೃತ್ಯ ಪ್ರದರ್ಶನ ನೀಡಿದರು ವಿದ್ಯಾರ್ಥಿಗಳು ಅಂಗನವಾಡಿ ಕಾರ್ಯಕರ್ತೆಯಾದ ಸರಸ್ವತಿ ಮಕ್ಕಳಿಂದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳಾದ ಪಾರ್ವತಿ. ಸಮುದಾಯ ಆರೋಗ್ಯ ಅಧಿಕಾರಿಗಳಾದ ಶೋಭಾ ಮಕ್ಕಳ ತಾಯಿಂದಿರು ಉಪಸ್ಥಿತರಿದ್ದರು.

## ಭಾರಿ ಮಳೆಯಿಂದಾಗಿ ಜಮೀನುಗಳಿಗೆ ನುಗ್ಗಿದ ಮಾರ್ಕಂಡೇಯ ನದಿ ನೀರು

❑ ನೈಜ್ಯ ದೇಸೆ ನ್ಯೂಸ್

ಬೆಳಗಾವಿ: ಜಿಲ್ಲೆಯಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ಮಾರ್ಕಂಡೇಯ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ತೀರ ಪ್ರದೇಶದ ನೂರಾರು ಎಕರೆ ಕೃಷಿ ಜಮೀನುಗಳಿಗೆ ನೀರು ನುಗ್ಗಿ ಬೆಳೆಗಳು ಸಂಪೂರ್ಣ ಜಲಾವೃತಗೊಂಡಿವೆ.

ಇದರಿಂದ ರೈತರ ಬೆಳೆಗಳು ಜಲಾವೃತಗೊಂಡು ಅಪಾರ ನಷ್ಟದ ಆತಂಕ ಎದುರಾಗಿದೆ. ಮಳೆ ನಿಂತರೇ ಸಾಕಪ್ಪ ಎನ್ನುವರ ಮಟ್ಟಕ್ಕೆ ರೈತರು ಮಳೆರಾಯನಿಗೆ ಕೈ ಮುಗಿಯುತ್ತಿದ್ದಾರೆ. ಮಹಾರಾಷ್ಟ್ರದ ಅಣೆಕಟ್ಟು ಪ್ರದೇಶ ಹಾಗೂ ಪಶ್ಚಿಮ ಘಟ್ಟಗಳಲ್ಲಿ ವ್ಯಾಪಕ ಮಳೆಯಾಗುತ್ತಿರುವುದರಿಂದ ನದಿಗೆ ಒಳಹರಿವು ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಭತ್ತ, ಕಬ್ಬು ಬೆಳೆ ಸಂಪೂರ್ಣ ಜಲಾವೃತ ಮಾರ್ಕಂಡೇಯ ನದಿಯ ಆರ್ಭಟದಿಂದಾಗಿ ಕಂಗ್ರಾಳಿ, ಅಂಬೇವಾಡಿ, ಅಲತಗಾ, ಬೆಳಗುಂದಿ ಹಾಗೂ ಹಿಂದಲಗಾ ಭಾಗದ ನೂರಾರು ಎಕರೆ ಜಮೀನುಗಳಿಗೆ ಪ್ರವಾಹದ ನೀರು ನುಗ್ಗಿದೆ.



ಹೊಲಗಳಲ್ಲಿ ಬೆಳೆದು ನಿಂತಿದ್ದ ಭತ್ತ, ಕಬ್ಬು, ಸೋಯಾಬಿನ್ ಮತ್ತು ತರಕಾರಿ ಬೆಳೆಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಡೆಯಾಗಿದ್ದು, ರೈತರು ಭಾರಿ ನಷ್ಟದ ಭೀತಿಯಲ್ಲಿದ್ದಾರೆ ನದಿ ತೀರದ ಜನರಿಗೆ ಹೈ ಅಲರ್ಟ್: ಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಡಳಿತವು ನದಿ ತೀರದ ಗ್ರಾಮಸ್ಥರಿಗೆ ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಗೊಳ್ಳುವಂತೆ ಮುನ್ನೆಚ್ಚರಿಕೆ ನೀಡಿದೆ. ಯಾವುದೇ ತುರ್ತು ರಕ್ಷಣಾ ಕಾರ್ಯಕ್ಕೆ ಎಸ್‌ಡಿಆರ್‌ಎಫ್ (ಖಆಖಈ) ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿಡಲಾಗಿದೆ. ಸಾರ್ವಜನಿಕರು ನದಿ ದಂಡೆಗೆ ತೆರಳುವುದು ಮತ್ತು ಸೆಲ್ಫಿ ತೆಗೆದುಕೊಳ್ಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

## ಮೂಲಭೂತ ಸೌಕರ್ಯಗಳಿಗೆ ಆಗ್ರಹಿಸಿ ಜಾಲಹಳ್ಳಿಯಲ್ಲಿ ಬೃಹತ್ ಪ್ರತಿಭಟನೆ; ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಕ್ರೋಶ

❑ ನೈಜ್ಯ ದೇಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ತಾಲೂಕು ಘಟಕ, ದೇವದುರ್ಗ) ನೇತೃತ್ವದಲ್ಲಿ ಪ್ರತಿಯೊಬ್ಬರಿಗೂ ಸೂರು, ಭೂಮಿ, ರುದ್ರಭೂಮಿ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ ಬೃಹತ್ ಪ್ರತಿಭಟನಾ ಧರಣಿ ನಡೆಸಲಾಯಿತು. ಪ್ರತಿಭಟನೆಯ ಬಳಿಕ ಜಾಲಹಳ್ಳಿ ನಾಡಕಚೇರಿ ಮೂಲಕ ತಹಶೀಲ್ದಾರರಿಗೆ ವಿವಿಧ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನಾಕಾರರು ಮಾತನಾಡಿ, ತಾಲೂಕು ಮಟ್ಟದ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಬಡ ಹಾಗೂ ವಸತಿ ರಹಿತ ಕುಟುಂಬಗಳು ತೀವ್ರ ಸಂಕಷ್ಟದಲ್ಲಿವೆ




ಎಂದು ಆರೋಪಿಸಿದರು. ಸ್ವಂತ ಮನೆ ನಿರ್ಮಿಸಿಕೊಳ್ಳಲು ನಿವೇಶನವೂ ಇಲ್ಲ, ಸಾಗುವಳಿ ಮಾಡಲು ಭೂಮಿಯೂ ಇಲ್ಲದ ಕಾರಣ ಅನೇಕ ಕುಟುಂಬಗಳು ಸಂಕಷ್ಟದ ಜೀವನ ನಡೆಸುತ್ತಿವೆ ಎಂದು ತಿಳಿಸಿದರು.

ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಸಲ್ಲಿಸಲಾದ ನಮೂನೆ?57 ಅರ್ಜಿಗಳನ್ನು ಯಾವುದೇ ಸಮರ್ಪಕ ಕಾರಣವಿಲ್ಲದೆ ತಿರಸ್ಕರಿಸಲಾಗುತ್ತಿದೆ ಎಂದು ಆರೋಪಿಸಿದ ಅವರು, ಅರ್ಜಿಗಳನ್ನು ಮರುಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಭೂ ಮಂಜೂರಾತಿ ನೀಡುವಂತೆ ಸರ್ಕಾರವನ್ನು ಒತ್ತಾಯಿಸಿದರು.

**ಪ್ರಮುಖ ಬೇಡಿಕೆಗಳು:** – ವಸತಿ ರಹಿತ ಕುಟುಂಬಗಳಿಗೆ ಕನಿಷ್ಠ 3040 ಅಳತೆಯ ನಿವೇಶನ ವಿತರಿಸಲು ಸರ್ಕಾರಿ ಭೂಮಿ ಗುರುತಿಸಬೇಕು. ಅಗತ್ಯವಿದ್ದಲ್ಲಿ ಖಾಸಗಿ ಭೂಮಿ ಖರೀದಿಸಿ ಹಂಚಿಕೆ ಮಾಡಬೇಕು. – ಚಿಂಚೋಡಿ ಗ್ರಾಮದ ಸರ್ವೆ ನಂ.123ರ 27.23 ಎಕರೆ ಭೂಮಿಯನ್ನು ವಸತಿಗಾಗಿ ಮಂಜೂರು ಮಾಡಿ, ಹೊಸೂರುಸಿದ್ದಾಪುರ ಹಾಗೂ ಚಿಂಚೋಡಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಭೂಮಿಗೆ ಹದ್ದು ಬಸ್ತುನಡೆಸಬೇಕು. ಜಾಲಹಳ್ಳಿ?ದೇವದುರ್ಗ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ ಬಾಗೂರು ಹಾಗೂ ಹೇರುಂಡಿ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು. ಬುಂಕಲದೊಡ್ಡಿ ಸರ್ಕಾರಿ ಪ್ರೌಢಶಾಲೆಗೆ ರಸ್ತೆ ಹಾಗೂ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ವೀರಗೋಟ ಪುನರ್ವಸತಿ ಗ್ರಾಮದ ದಲಿತ ಕಾಲೋನಿಯಲ್ಲಿ ?1 ಕೋಟಿ ವೆಚ್ಚದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಭವನ ನಿರ್ಮಿಸಿ, ರುದ್ರಭೂಮಿಗೆ ಜಾಗ ಮಂಜೂರು ಮಾಡಬೇಕು. ಲಿಂಗದಹಳ್ಳಿ ಪುನರ್ವಸತಿ ಗ್ರಾಮಕ್ಕೆ "ದೇಸಾಯಿ ನಗರ" ಅಥವಾ "ದೇಸಾಯಿ ಕ್ಯಾಂಪ್" ಎಂದು ಮರುನಾಮಕರಣ ಮಾಡಬೇಕು. ಬಾಗೂರು ಗ್ರಾಮದಲ್ಲಿ 10

4ನೇ ಪುಟಕ್ಕೆ

## ಸಾಹಿತ್ಯ ಸಿಂಚನ

### ನನ್ನ ಒಡತಿ

ನೋವಿಸದಿರು ನನ್ನ ಒಡತಿ
ನಿನ್ನ ಕಣ್ಣ ನೋಟದಲ್ಲೇ ಕರಗಿ ಹೋಗಿರುವೆ
ಮಾತಾಡಿಸದಿರು ಒಡತಿ
ನಿನ್ನ ಮೌನದಲ್ಲೇ ಸಾವಿರ ಕವನ ಕೇಳಿರುವೆ

ಮುನಿಸಿಕೊಂಡರೆ ಒಡತಿ
ನನ್ನ ಉಸಿರೇ ನಿಂತಂತೆ ಆಗುತ್ತೆ
ಸೆರಗು ಸರಿಸಿ ನಕ್ಕರೆ ಸಾಕು
ಬಾಡಿದ ಬದುಕಿಗೆ ಮಲ್ಲಿಗೆ ಚೆಲ್ಲಿದಂತೆ

ಕೊಂಚ ಕೋಪದವನು ನಾನು
ಆದ್ರೆ ನಿನ್ನ ಮುಂದೆ ಮಗು ನಾನು
ಅಂಚು ರೂಪದ ತಾಳ್ಮೆಯವಳು ನೀನು
ನನ್ನ ಸಿಟ್ಟನ್ನೇ ಸಿಂಗಾರ ಮಾಡುವವಳು ನೀನು

ಕೈ ಹಿಡಿದು ನಡೆ ಒಡತಿ
ಗೆಜ್ಜೆ ದನಿಗೆ ನನ್ನ ಎದೆ ಲಯ ತಪ್ಪಲಿ
ನಿನ್ನ ಹೆಜ್ಜೆ ಜೊತೆ ನನ್ನ ಹೆಜ್ಜೆ ಸೇರಿದರೆ
ನಾಚಿ ನಿರಾಗಿ ನವಿಲು ಮರೆಯಲಿ ಅದರ ಲಜ್ಜೆ

ನೀನಿಲ್ಲದೆ ನಾನಿಲ್ಲ ಒಡತಿ
ನಿನ್ನ ಉಸಿರೇ ನನ್ನ ಪದ್ಯ
ನಿನ್ನ ನಗುವೇ ನನ್ನ ಸತ್ಯ
ಬಾ ಒಡತಿ, ಬದುಕೇ ನಮ್ಮದಾಗಲಿ

:–ಎಸ್. ದುರಗಪ್ಪ. ಕುಷ್ಟಗಿ.

## ವಾರದ ಸಂತೆಯಲ್ಲಿ ಬಿಡಾಡಿ ದನಗಳ ಹಾವಳಿ: ಮಾಲೀಕರಿಗೆ ಪುರಸಭೆ ಎಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ವಾರದ ಸಂತೆಯಲ್ಲಿ ಬಿಡಾಡಿ ದನಗಳ ಹಾವಳಿ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿ ನರಸರೆಡ್ಡಿ ತಿಳಿಸಿದ್ದಾರೆ.**



ಮಸ್ಕಿ ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಿಂದ ಪ್ರತಿ ವಾರದ ಸಂತೆಗೆ ಸುಮಾರು 5,000 ರಿಂದ 6,000 ಜನರು ವ್ಯಾಪಾರ–ವಹಿವಾಟು ಹಾಗೂ ದಿನಸಿ, ಧಾನ್ಯ ಮತ್ತು ತರಕಾರಿ ಖರೀದಿಗಾಗಿ ಆಗಮಿಸುತ್ತಾರೆ. ಈ ವೇಳೆ ಸಂತೆ ಬಜಾರ್, ಹರಾಜು ಮೈದಾನ ಹಾಗೂ ಪ್ರಮುಖ ರಸ್ತೆಗಳಲ್ಲಿ ಬಿಡಾಡಿ ದನಗಳು ಮತ್ತು ಕರುಗಳು ಗುಂಪುಗುಂಪಾಗಿ ಸಂಚರಿಸುತ್ತಿರುವುದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದ್ದು, ಹಲವು ಅಪಘಾತಗಳು ಸಂಭವಿಸುತ್ತಿವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಜಾನುವಾರುಗಳ ಮಾಲೀಕರು ತಮ್ಮ ದನ ಹಾಗೂ ಕರುಗಳನ್ನು ಸಾರ್ವಜನಿಕ ರಸ್ತೆ ಮತ್ತು ಸಂತೆ ಪ್ರದೇಶಗಳಲ್ಲಿ ಬಿಡದಂತೆ ಪುರಸಭೆ ಮನವಿ ಮಾಡಿದೆ. ಸೂಚನೆ ಪಾಲಿಸದಿದ್ದಲ್ಲಿ ಕೆಲವೇ ದಿನಗಳಲ್ಲಿ ಬಿಡಾಡಿ ದನ ಹಾಗೂ ಕರುಗಳನ್ನು ವಶಪಡಿಸಿಕೊಂಡು ರಾಯಚೂರು ಜಿಲ್ಲೆಯ ಆಲೂರು ತಾಲೂಕಿನ ಜ್ಯೋತಿರ್ಲಿಂಗೇಶ್ವರ ಗೋಶಾಲೆಗೆ ಸಾಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಸಾರ್ವಜನಿಕರ ಸುರಕ್ಷತೆ ಮತ್ತು ಸುಗಮ ಸಂಚಾರದ ಹಿತದೃಷ್ಟಿಯಿಂದ ಜಾನುವಾರುಗಳ ಮಾಲೀಕರು ಪುರಸಭೆಯ ಸೂಚನೆಗೆ ಸಹಕರಿಸುವಂತೆ ಮಸ್ಕಿ ಪುರಸಭೆಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಪುರಸಭೆ ಮುಖ್ಯಾಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ದಾಖಲಿಸಿರುವ ಸುಳ್ಳು ಪ್ರಕರಣ ಕೈ ಬಿಡುವಂತೆ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜು 9 ಪುರಸಭೆ ವ್ಯಾಪ್ತಿಯ ವಾರ್ಡ್ ನಂ. 05 ರ ಆಸ್ತಿ ಸಂಖ್ಯೆ: 2–6–205 ಸಂಬಂಧಿಸಿದ ಸಿವಿಲ್ ಪ್ರಕರಣ ಕುರಿತು ಹಿರಿಯ ಆರೋಗ್ಯ ನಿರೀಕ್ಷ ಶಹನವಾಜ, ಮತ್ತು ದ್ವಿ.ದ.ಸ ಹಾಗೂ ಈ ಸಂಘದ ಅಧ್ಯಕ್ಷ ಪುರಸಭೆ ಮುಖ್ಯಿಧಿಕಾರಿಗೆ ಠಾಣೆಗೆ ಕರೆಯಿಸಿ ನಮ್ಮ ಸ್ಪಷ್ಟಿಕರಣವನ್ನು ಕೇಳದೇ ಈ ಪ್ರಕಣದಲ್ಲಿ ರಾ–ಜಿಯಾಗದಿದ್ದಲ್ಲಿ.**




ನಿಮ್ಮನ್ನು ಒದ್ದು ಒಳಗೆ ಹಾಕುತ್ತೇನೆಂದು ಭಯ ಹುಟ್ಟಿಸಿರುತ್ತಾರೆಂದು ಕರ್ನಾಟಕ ರಾಜ್ಯ ಪೌರಾ ಸೇವಾ ನೌಕರರ ಸೇವಾ ಸಂಘ ದ ಸಂಘಟನಾ ಕಾರ್ಯದರ್ಶಿ ಹಂಪಯ್ಯ ಪಾಟೀಲ್ ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿ ನಂತರ ಮಾತನಾಡಿದ ಅವರು ಇಲಾಖೆಯಿಂದ ಅಧಿಕೃತ ಅನುಮತಿ ಪಡೆಯದೇ ಮತ್ತು ದಾಖಲೆಗಳನ್ನು ಪರಿಶೀಲಿಸದೇ ದೂರು ದಾರರ ಪರವಾಗಿ ಏಕ ಪಕ್ಷೀಯವಾಗಿ, ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ತಮ್ಮ ಮೇಲೆ ಮತ್ತು ಇತರ ಸಿಬ್ಬಂದಿಗಳ ಮೇಲೆ ಎಫ್ ಐ ಆರ್ ದಾಖಲಾಗಿದ್ದು ಕರ್ತವ್ಯ ನಿರ್ವಹಿಸಲು ಬಯವಾಗುತ್ತಿದೆ ಪುರಸಭೆಯಲ್ಲಿ ಆಸ್ತಿಗೆ ಸಂಬಂದ ಪಟ್ಟಂತೆ ಹಲವಾರು ಸಿವಿಲ್ ಪ್ರಕರಣಗಳು ಇರುತ್ತವೆ.

ನಾಳೇ ಸಾರ್ವಜನಿಕರು ಪ್ರಕರಣದ ಆಧಾರದ ಮೇಲೆ ದೂರು ನೀಡಿದಂತೆ ಸ್ಥಳೀಯ ಪೋಲಿಸ್ ಇನ್ಸ್ಪೆಕ್ಟರ್ ಏಕ ಪಕ್ಷೀಯವಾಗಿ ಪ್ರಕರಣ ದಾಖಲಿಸುತ್ತಾ ಹೊದರೇ ಪುರಸಭೆಯಲ್ಲಿ ನೌಕರಿ ಮಾಡುವುದು ಕಷ್ಟ ವಾಗುತ್ತದೆ. ಕಾನೂನು ಸುವ್ಯವಸ್ಥೆ ಕಾಪಡುವವರೇ ಕಾನೂನು ಉಲ್ಲಂಘಿಸಿ, ಕಾನೂನು ಸುವ್ಯವಸ್ಥೆ ಹಾಳಮಾಡುವ ಹೊಣೆಗಾರಿಕೆ ಕಾರಣ–ರಾಗಿದ್ದಾರೆ ಒಂದು ವೇಳೆ ಇದೆ ರೀತಿಯಾಗಿ ಸಿವಿಲ್ ಪ್ರಕರಣದಲ್ಲಿ ಪುರಸಬೆ ಯಿಂದ ಸ್ಪಷ್ಟಿಕರಣ ಕೇಳದೆ ಏಕ ಪಕ್ಷಿಯವಾಗಿ ಪ್ರಕರಣ ದಾಖಲಿಸಿದ್ದಲ್ಲಿ ಪುರಸಭೆ ಯಿಂದ ಸಾರ್ವಜನಿಕ–ರಿಗೆ ನೀಡುವ ಎಲ್ಲಾ ಸೇವೆಗಳನ್ನು ಬಂದ್ ಮಾಡಿ ಹೋರಾಟವನ್ನು ಹಮ್ಮಿಕೊಳ್ಳಲಾಗುವುದೆಂದು ಈ ವಿಷಯವನ್ನು ಗಂಭೀರವಾಗಿ ಪರಿಗೀಣಿಸಿ ಸದರಿ ಪ್ರಕರಣದ ವರದಿಯನ್ನು ಇಲಾಖೆಯ ಉನ್ನತ ಅಧಿಕಾರಿಗಳಾದ ಜಿಲ್ಲಾಧಿಕಾ–ರಿಗಳಿಗೆ ಮತ್ತು ಪ್ರಾದೇಶಿಕ ಆಯುಕ್ತರು.

ಕಲಬುರಗಿ ಹಾಗೂ ಸುಪ್ರೀಡೆಂಟ್ ಆಫ್ ಪೋಲಿಸ್ ರಾಯಚೂರು ಇವ–ರಿಗೆ ವರದಿಯನ್ನು ಸಲ್ಲಿಸಿ ಸುಳ್ಳು ಪ್ರಕರಣ ದಾಖಲಿಸಿರುವ ಸ್ಥಳೀಯ ಪೋಲಿಸ್ ಠಾಣೆಯ ಪೋಲಿಸ್ ಇನ್ಸಪೇಕ್ಟರ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳ ಬೇಕೆಂದು ಮನವಿಯ ಮೂಲಕ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಪುರಸಭೆಯ ಮುಖ್ಯಿಧಿಕಾರಿ ನಟರಾಜ್, ಶಿವಲಿಂಗ ಮ್ಯಾಗಳ ಮನಿ , ಅಶೋಕ್ , ಶಾನವಾಜ್ , ರಮೇಶ್ , ಮಾನಪ್ಪ , ವೀರೇಶ್ , ಮಂಜುನಾಥ್ , ಜಾಗೀರ್ , ಗಿರಿಜಾ , ಸುವರ್ಣ , ಅಶ್ವಿನಿ , ಮಲ್ಲೇಶ್ , ಭಾಗ್ಯಜ್ಯೋತಿ ಸೇರಿದಂತೆ ಪುರಸಭೆಯ ಎಲ್ಲ ಸಿಬ್ಬಂದಿಗಳು ಹಾಗೂ ಪೌರಾ ಕಾರ್ಮಿಕರು ಇದ್ದರು .

## ಜು.11 ರಂದು ರಾಷ್ಟ್ರೀಯ ಲೋಕಾ ಅದಾಲತ್ ರಾಜಿ ಸಂಧಾನ ಮೂಲಕ ವ್ಯಾಜ್ಯಗಳ ಇತ್ಯಾರ್ಥಕ್ಕೆ ಅವಕಾಶ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರ:ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಆದೇಶದ ಪ್ರಕಾರ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ತೆರದ ನ್ಯಾಯಾಲಯದಲ್ಲಿ ಜುಲೈ 11 ರಂದು ರಾಷ್ಟ್ರೀಯ ಲೋಕಾ ಅದಾಲತ್ ಹಮ್ಮಿಕೊಳ್ಳಲಾಗಿದೆ. ರಾಜಿ ಸಂಧಾನದ ಮೂಲಕ ವ್ಯಾಜ್ಯಗಳ ಇತ್ಯರ್ಥಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸೋಮಶೇಖರ ಎ, ಹೇಳಿದರು.**

ನಗರದ ತಾಲೂಕು ನ್ಯಾಯಾಲಯದಲ್ಲಿ ಮಂಗಳವಾರ ಸಾಯಂಕಾಲ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜೀ ಮಾಡಿಕೊಳ್ಳಬಹುದಾದ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣ, ಸಂಚಾರ ನಿಯಮ ಉಲ್ಲಂಘನೆ ಪ್ರಕರಣ, ಬ್ಯಾಂಕ್ ಸಾಲ ಮರುಪಾವತಿ ಮತ್ತು ಹಣಕಾಸು ವಿವಾದಗಳು, ಕೌಟುಂಬಿಕ ವ್ಯಾಜ್ಯಗಳು ಮತ್ತು ವಿವಾಹ ವಿಚ್ಛೇದನ ಪ್ರಕರಣಗಳು, ಭೂಸ್ವಾಧೀನ ಮತ್ತು ಕಾರ್ಮಿಕ ವಿವಾದಗಳು, ಮೋಟಾರು ಅಪಘಾತ ಪರಿಹಾರ ಮತ್ತು ವಿಮೆ ವಿವಾದಗಳು, ವಿದ್ಯುತ್ ಚ್ಛಕ್ತಿ, ಕಂದಾಯ ವಸೂಲಿ, ನೀರಿನ ವಸೂಲಾತಿ, ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಕಕ್ಷಿದಾರರು ಲೋಕ ಅದಾಲತ್‌ನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಕಕ್ಷಿದಾರರ ಸಮಯ ಮತ್ತು ಹಣ ಎರಡೂ ಉಳಿಯುತ್ತದೆ. ಪ್ರಕರಣದ ಇತ್ಯಾರ್ಥಕ್ಕೆ ಯಾವುದೇ ಶುಲ್ಕ ಇರುವುದಿಲ್ಲ. ಕಕ್ಷಿದಾರರ ನಡುವೆ ಯಾವುದೇ ವೈಮನಸ್ಸಿಗೆ ಅವಕಾಶವಿಲ್ಲದೆ, ಪರಸ್ಪರ ಒಪ್ಪಿಗೆಯಿಂದ ವಿವಾದ ಬಗೆಹರಿಯುವುದರಿಂದ ಸಂಬಂಧಗಳು ಗಟ್ಟಿಯಾಗಿ ಉಳಿಯುತ್ತವೆ. ಕಕ್ಷಿದಾರರು ತಮ್ಮ ದೀರ್ಘಕಾಲದ ವಿವಾದಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು ಎಂದರು. ಈ ಸಂದರ್ಭದಲ್ಲಿ: ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ರೂಪಾ ಸಿ.ವಗ್ಗಾ 1ನೇ ಅಪಾರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಸರಸ್ವತಿ ಹೋಟಕರ್, ನ್ಯಾಯವಾದಿಗಳ ಸಂಘದ ತಾಲೂಕು ಅಧ್ಯಕ್ಷ ಕೆ.ಭೀಮನಗೌಡ ವಕೀಲರು, ಸೇರಿದಂತೆ ಹಿರಿಯ ಮತ್ತು ಕಿರಿಯ ವಕೀಲರು ಇದ್ದರು.

## ಬಿಜೆಪಿ ಪಕ್ಷದ ಗ್ರಾಮೀಣ ಮಂಡಲ ಯುವ ಮೋರ್ಚ್ ಅಧ್ಯಕ್ಷರಾಗಿ ವಂಶಿಕೃಷ್ಣ ನೆಕ್ಕಂಟಿ ನೇಮಕ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಗ್ರಾಮೀಣ ಮಂಡಲ್ ಯುವ ಮೋರ್ಚ್ ಅಧ್ಯಕ್ಷರಾಗಿ ವಂಶಿಕೃಷ್ಣ ನೆಕ್ಕಂಟಿ ಗೊರೇಬಾಳ ಕ್ಯಾಂಪ್ ಇವರನ್ನು ನೇಮಕ ಮಾಡಿ ಆದೇಶ ಮಾಡಲಾಗಿದೆ ಎಂದು ಗ್ರಾಮೀಣ ಮಂಡಲ ತಾಲೂಕು ಅಧ್ಯಕ್ಷ ವೆಂಕೋಬ ನಾಯಕ ರಾಮತ್ನಾಳ್ ತಿಳಿಸಿದ್ದಾರೆ.**




ನೂತನವಾಗಿ ನೇಮಕವಾದ ಗ್ರಾಮೀಣ ಮಂಡಲದ ಯುವ ಮೋರ್ಚ್ ಅಧ್ಯಕ್ಷ ವಂಶಿಕೃಷ್ಣ ನೆಕ್ಕಂಟಿ ಮಾತನಾಡಿ, ಭಾರತೀಯ ಜನತಾ ಪಾರ್ಟಿ ಪಕ್ಷಕ್ಕೆ ಪ್ರಾಮಾಣಿಕವಾಗಿ ಅನೇಕ ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದು, ಪಕ್ಷ ನನ್ನನ್ನು ಗುರುತಿಸಿ ಈ ಸ್ಥಾನ ನೀಡಿದೆ. ಇನ್ನೂ ಮುಂದೆ ಹೆಚ್ಚಿನ ಜವಾಬ್ದಾರಿ ನೀಡಿದೆ. ಮುಂದಿನ ದಿನಗಳಲ್ಲಿ ಯುವಪಡೆಯೊಂದಿಗೆ ಪಕ್ಷ ಕಟ್ಟಲು ನನ್ನ ಶಕ್ತಿ ಮೀರಿ ಕೆಲಸ ಮಾಡುವೆ, 2028 ರ ಚುನಾವಣೆ ವೇಳೆಗೆ ಬಿಜೆಪಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವುದಕ್ಕೆ ಕೆಲಸ ಮಾಡಿ ತಾಲೂಕಿನಲ್ಲಿ ಕಮಲ ಹರಳುವಂತೆ ಹಗಲಿರುಳು ಶ್ರಮವಹಿಸಿ ಕೆಲಸ ಮಾಡುವೆ.

ಗ್ರಾಮೂಣ ಮಂಡಲ ಯುವ ಮೋರ್ಚ್ ಅಧ್ಯಕ್ಷನಾಗಿ ನೇಮಕ ಮಾಡಲು ಸಹಕರಿಸಿದ ಭಾರತೀಯ ಜನತಾ ಪಾರ್ಟಿಯ ಹಿರಿಯ ಮುಖಂಡರಿಗೆ ಕೃತಜ್ಞತೆ ಸಲ್ಲಿಸುವೆ ಎಂದರು. ಈ ವೇಳೆ: ನಗರಸಭೆ ಮಾಜಿ ಸದಸ್ಯರಾದ ರಾಜಶೇಖರ, ನಗರ ಮಂಡಲ ಅಧ್ಯಕ್ಷ ಸಿದ್ರಾಮೇಶ ಮನ್ನಾಪೂರು, ಯುವ ಮೋರ್ಚ್ ನಗರ ಘಟಕದ ಅಧ್ಯಕ್ಷ ಮುತ್ತುಬರ್ಸಿ, ಸೋಮನಾಥ ಕಲ್ಲೂರು, ಮಲ್ಲಿಕಾರ್ಜುನ ಕುನ್ನಟಗಿ, ರವಿಕುಮಾರ ಮಾಸ್ತಾನ ಕ್ಯಾಂಪ್, ಸಿದ್ದಪ್ಪ, ಸುನೀಲಕುಮಾರ ನಾಯಕ ಸೇರಿದಂತೆ ಅನೇಕರಿದ್ದರು.

## ಯುಎಇಯಿಂದ ಕರಾಚಿಗೆ ಬರುತ್ತಿದ್ದ ಪಾಕಿಸ್ತಾನದ ಸರಕು ವಿಮಾನ ನಾಪತ್ತೆ

❑ ನೈಜ್ಯ ದೆಸೆ ನ್ಯೂಸ್

**ಲಾಹೋರ್: ಯುನೈಟೆಡ್ ಅರಬ್ ಎಮಿರೇಟ್ಸ (ಯುಎಇ)ನ ಶಾರ್ಜಾದಿಂದ ಕರಾಚಿಗೆ ಬರುತ್ತಿದ್ದ ಪಾಕಿಸ್ತಾನದ ಸರಕು ಸಾಗಣೆ ವಿಮಾನವು ಐವರು ಸಿಬ್ಬಂದಿಯೊಂದಿಗೆ ರಾತ್ರಿ ನಾಪತ್ತೆಯಾಗಿದೆ ಎಂದು ಪಾಕಿಸ್ತಾನ ವಿಮಾನ ನಿಲ್ದಾಣಗಳ ಪ್ರಾಧಿಕಾರ ತಿಳಿಸಿದೆ.**




ನಾಪತ್ತೆಯಾಗಿರುವ ವಿಮಾನವನ್ನು ಪತ್ತೆಹಚ್ಚಲು ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಸಮುದ್ರದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಪ್ರಾಧಿಕಾರ ತಿಳಿಸಿದೆ. ಎಕ್?ಸನಲ್ಲಿ ಪ್ರಕಟಣೆ ನೀಡಿರುವ ಪಿಎಎ,ಕೆ.2 ಏರ್‌ವೇಸ್ ಸಂಸ್ಥೆಯ ಬೋಯಿಂಗ್ 737 ಸರಕು ವಿಮಾನವು ಶಾರ್ಜಾದಿಂದ ಕರಾಚಿಗೆ ಬರುತ್ತಿದ್ದ ವೇಳೆ ರಾತ್ರಿ 9.18ಕ್ಕೆ ನ್ಯಾವಿಗೇಶನ್ ವ್ಯವಸ್ಥೆಯಲ್ಲಿ ತಾಂತ್ರಿಕ ದೋಷ ಉಂಟಾಗಿದೆ ಎಂದು ತಿಳಿಸಿತ್ತು. ತಕ್ಷಣವೇ ಕರಾಚಿ ಏರಿಯಾ ಕಂಟ್ರೋಲ್ ಸೆಂಟರ್ (ಎಸಿಸಿ) ವಿಮಾನಕ್ಕೆ ಅಗತ್ಯ ಮಾರ್ಗದರ್ಶನ ನೀಡಿತ್ತು ಎಂದು ಹೇಳಿದೆ.

ಆದರೆ ರಾತ್ರಿ 9.22ರ ಸುಮಾ–ರಿಗೆ ವಿಮಾನವು ರಾಡಾರ್‌ನಲ್ಲಿ ಏಕಾಏಕಿ ವೇಗವಾಗಿ ಕೆಳಕ್ಕೆ ಇಳಿಯುತ್ತಿರುವುದು ಹಾಗೂ ದಿಕ್ಕು ತ್ವರಿತವಾಗಿ ಬದಲಾಗಿರುವುದು ಕಂಡುಬಂದಿತು. ಬಳಿಕ ಕರಾಚಿಯಿಂದ ಸುಮಾರು 155 ನಾಟಿಕಲ್ ಮೈಲುಗಳ ಪಶ್ಚಿಮಕ್ಕೆ ವಿಮಾನದೊಂದಿಗೆ ರಾಡಾರ್ ಸಂಪರ್ಕ ಮತ್ತು ಸಂವಹನ ಸಂಪೂರ್ಣವಾಗಿ ಕಡಿತಗೊಂಡಿತು ಎಂದು ಪಿಎಎ ತಿಳಿಸಿದೆ. ಘಟನೆಯ ಬಳಿಕ ತಕ್ಷಣವೇ ರೆಸ್ಕ್ಯೂ ಕೋಆರ್ಡಿನೇಷನ್ ಸೆಂಟರ್ ಸಕ್ರಿಯಗೊಳಿಸಲಾಗಿದ್ದು, ಸಮುದ್ರದಲ್ಲಿ ವಿವಿಧ ಸಂಸ್ಥೆಗಳ ನೆರವಿನಿಂದ ವ್ಯಾಪಕ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ.ನಾಪತ್ತೆಯಾಗಿರುವ ವಿಮಾನದಲ್ಲಿ ಒಟ್ಟು ಐವರು ಸಿಬ್ಬಂದಿ ಇದ್ದರು ಎಂದು ಪಾಕಿಸ್ತಾನ ವಿಮಾನ ನಿಲ್ದಾಣಗಳ ಪ್ರಾಧಿಕಾರ ತಿಳಿಸಿದೆ.

## ಜುಲೈ 14ರಂದು ಕೆ.ಎಸ್.ಎನ್. ಜನ ಕಲ್ಯಾಣ ಸಮಿತಿಯಿಂದ 'ಸಂಕಲ್ಪ ಸಮಾಗಮ' ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಇಲ್ಲಿನ ಮಸ್ಕಿ ಕ್ರಾಸ್ ಬಳಿ ಜುಲೈ 14ರಂದು ಸಂಜೆ 4 ಗಂಟೆಗೆ ಕೆ.ಎಸ್.ಎನ್. ಜನ ಕಲ್ಯಾಣ ಸಮಿತಿ ವತಿಯಿಂದ *'ಸಂಕಲ್ಪ ಸಮಾಗಮ'* ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ತಿಳಿಸಿದೆ. ಕೆ.ಎಸ್.ಎನ್. ಅವರ 49ನೇ ಹುಟ್ಟುಹಬ್ಬದ ಆಚರಣೆಯ ಅಂಗವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ನಾಲ್ಕು ಜಿಲ್ಲೆಗಳ ರೈತರ ಬಹುದಿನಗಳ ಕನಸಾದ ಸಮಗ್ರ ನೀರಾವರಿ ಯೋಜನೆಗಳ ಅನುಷ್ಠಾನ ಹಾಗೂ ರಾಯಚೂ–ರಿಗೆ ಏಮ್ಸ್ (ಂಋಋಒಋ) ಮಂಜೂರಾತಿಗಾಗಿ ಒತ್ತಾಯಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಪ್ರಮುಖ ಬೇಡಿಕೆಗಳು:**




ನವಲಿ ಜಲಾಶಯ ನಿರ್ಮಾಣ:* ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ರೈತರಿಗೆ ಅನುಕೂಲವಾಗುವಂತೆ ನವಲಿ ಜಲಾಶಯವನ್ನು ತಕ್ಷಣ ನಿರ್ಮಿಸಬೇಕು. ***ತಿಂಥಣಿ ಬ್ರಿಡ್ಜ್ ಜಲಾಶಯ:*** ಯಾದಗಿರಿ, ಗುಲ್ಬರ್ಗ (ಕಲಬುರಗಿ) ಮತ್ತು ರಾಯಚೂರು ಜಿಲ್ಲೆಗಳ ಜನರಿಗೆ ಅನುಕೂಲವಾಗುವಂತೆ ತಿಂಥಣಿ ಬ್ರಿಡ್ಜ್ ಬಳಿ ಜಲಾಶಯ ನಿರ್ಮಾಣ ಮಾಡಬೇಕು. ಈ ಯೋಜನೆಗಳಿಗಾಗಿ ರಾಜ್ಯ ಸರ್ಕಾರಕ್ಕೆ ಒತ್ತಾಯ ಮಾಡಲಾಗುವುದು. **ರಾಯಚೂರಿಗೆ ಏಮ್ಸ್ (AIIMS):*** ಹಿಂದುಳಿದ ರಾಯಚೂರು ಜಿಲ್ಲೆಗೆ ಏಮ್ಸ್ ಸಂಸ್ಥೆಯನ್ನು ಮಂಜೂರು ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲು ಈ ಕಾರ್ಯಕ್ರಮದ ಮೂಲಕ ಸಂಕಲ್ಪ ಮಾಡಲಾಗುತ್ತಿದೆ. ಇದು ಸಂಪೂರ್ಣವಾಗಿ ಪಕ್ಷಾತೀತವಾಗಿ ನಡೆಯುತ್ತಿರುವ ಕಾರ್ಯಕ್ರಮವಾಗಿದೆ. # ದಿವ್ಯ ಸನ್ನಿಧಿ ಮತ್ತು ಉದ್ಘಾಟನೆ: ಈ ಬೃಹತ್ ಕಾರ್ಯಕ್ರಮದ ಉದ್ಘಾಟನೆಯನ್ನು ಚಿಕ್ಕಮಗಳೂರಿನ ಶ್ರೀ ಗೌ–ರಿಗದ್ದೆ ಆಶ್ರಮದ ಅವಧೂತ *ಶ್ರೀ ವಿನಯ ಗುರೂಜಿ* ಅವರು ನೆರವೇರಿಸಲಿದ್ದಾರೆ. ತುರವಿಹಾಳದ ಅಮೋಘಸಿದ್ದೇಶ್ವರ ಮಠದ *ಶ್ರೀ ಮಾದಯ್ಯ ಗುರುಗಳು* ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಘನ ಉಪಸ್ಥಿತಿಯಲ್ಲಿ ಕವಿತಾಳ ಕಲ್ಮಠ ಮಹಾಸಾಸ್ವಾಮಿಗಳಾದ *ಮ.ನಿ.ಪ್ರ ಅಬಿನವ ಸಿದ್ದಲಿಂಗ ಸ್ವಾಮಿಗಳು* ಹಾಗೂ ಮುಂಡರಗಿಯ *ಶಿವಣ್ಣ ತಾತನವರು* ಪಾಲ್ಗೊಳ್ಳಲಿದ್ದಾರೆ. ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಗುಲ್ಬರ್ಗ ಜಿಲ್ಲೆಗಳಿಂದ ಸುಮಾರು 20 ಸಾವಿರಕ್ಕೂ ಅಧಿಕ ಸಾರ್ವಜನಿಕರು ಹಾಗೂ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

**ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದವರು:** ಕೆ.ಎಸ್.ಎನ್ ಜನ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ತಿಮ್ಮರೆಡ್ಡಿ ಗೌಡ ಭೋಗವತಿ, ಮಲ್ಲನಗೌಡ ನಕ್ಕುಂದಿ, ಉಮಕಾಂತ್ ಸಾಹುಕಾರ್ ಸೇಕಲ್, ನರಸಿಂಹರಾವ್ ಕುಲಕರ್ಣಿ, ಮಲ್ಲಿಕಾರ್ಜುನ ಜಕಲದಿನ್ನಿ, ಉಮೇಶ್ ಸಾಹುಕಾರ್ ಜೀಗರಕಲ್, ವೀರನಗೌಡ ಗಣದಿನ್ನಿ, ರಾಜಗೋಪಾಲ್ ನಾಯಕ್ ಕುರುಕುಂದ, ವಿನಯ್ ಕುಮಾರ್ ಸಿರವಾರ, ನಾಗರಾಜ್ ಗೌಡ ಮಾಲಿ ಪಾಟೀಲ್, ಮೌಲಾಸಾಬ ಗಣದಿನ್ನಿ, ಪರ್ವತಪ್ಪ ಸಾಹುಕಾರ್ ಕಲ್ಲೂರು, ಮಹೇಶ್ ಕಲ್ಲೂರು, ಪಂಪನಗೌಡ ಶಾಖಾಪುರ, ಬಸವರಾಜ ಅತ್ತನೂರು, ಮಲ್ಲಿಕಾರ್ಜುನ್ ಗೌಡ, ಅಮರಯ್ಯ ಸ್ವಾಮಿ, ವೀರೇಶ್ ನಾಯಕ್ ಬೆಟ್ಟದೂರು, ನಾಗಲಿಂಗಯ್ಯ ಸ್ವಾಮಿ ಹಾಗೂ ದೇವದುರ್ಗ ತಾಲೂಕು ಅಧ್ಯಕ್ಷರಾದ ಜಹೀರ್ ಪಾಷಾ ಇಡಪನೂರು, ಶರಣಪ್ಪ ಸಾಹುಕಾರ್ ಹೆಗ್ಗಡದಿನ್ನಿ, ಶರಣಬಸವ ನಾಯಕ್ ಜಾನೇಕಲ್, ಬಸವರಾಜ ನಕ್ಕುಂದಿ, ರಾಹುಲ್ ಕಲ್ಲಂಗರ್, ನವೀನ್ ಕುಮಾರ್, ಚಂದ್ರಶೇಖರ್ ನಾಯಕ್, ಮಾಲಿಂಗರಾಯ ಪಾತಪುರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವರದಿ : ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

# ನೇಮಕಾತಿ ಪ್ರಕಟಣೆ

**ನಿಮ್ಹಾನ್ಸ್ ನೇಮಕಾತಿ 2026 – 6 ಕೌನ್ಸಿಲರ್ ಹುದ್ದೆಗಳಿಗೆ ವಾಕ್–ಇನ್ ಸಂದರ್ಶನ ಜುಲೈ 4, 2026**

**ನಿಮ್ಹಾನ್ಸ್ ನೇಮಕಾತಿ 2026: 6 ಕೌನ್ಸಿಲರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯು ಜುಲೈ 2026 ರ ಓಖಒಊಂಓಖ ಅಧಿಕೃತ ಅಧಿಸೂಚನೆಯ ಮೂಲಕ ಕೌನ್ಸಿಲರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಜುಲೈ–2026 ರಂದು ವಾಕ್–ಇನ್–ಇಂಟರ್ವ್ಯೂಗೆ ಹಾಜರಾಗಬಹುದು ಅಧಿಕೃತ ವೆಬ್‌ಸೈಟ್: nimhans.ac.in**

## ಶಾಸಕರ ಭವನದಲ್ಲಿ ಅನಧಿಕೃತ ವಾಹನಗಳಿಗೆ ಕಡಿವಾಣ

ನೈಜ್ಯ ದೆಸೆ ನ್ಯೂಸ್

**ಶಾಸಕರ ಭವನ (ಎಲ್‌ಎಚ್)ದಲ್ಲಿನ ಸರ್ಕಾರಿ ವಾಹನಗಳ ದುರ್ಬಳಕೆಗೆ ಕಡಿವಾಣ ಹಾಕಲು ವಿಧಾನಸಭೆ ಕಾರ್ಯಾಲಯ ಕಠಿಣ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ. ಇನ್ನು ಮುಂದೆ ಶಾಸಕರ ಹೆಸರಿನಲ್ಲಿ ಬಳಸಲಾಗುವ ವಾಹನಗಳ ಬಾಡಿಗೆಯನ್ನು ನೇರವಾಗಿ ಸಂಬಂಧಿತ ಶಾಸಕರ ವೇತನದಿಂದಲೇ ವಸೂಲಿ ಮಾಡಲಾಗುತ್ತದೆ.**



ಜೊತೆಗೆ, ವೈಯಕ್ತಿಕ ಸಹಾಯಕರು, ಅತಿಥಿಗಳು ಹಾಗೂ ಪರಿಚಯಸ್ಥರ ಬಳಕೆಗಾಗಿ ವಾಹನಗಳನ್ನು ಶಿಫಾರಸು ಮಾಡುವ ಪದ್ಧತಿಗೂ ಬ್ರೇಕ್ ಹಾಕಲಾಗಿದ್ದು, ವಾಹನ ಬಳಕೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರು, ಹಾಲಿ ಹಾಗೂ ಮಾಜಿ ಶಾಸಕರಿಗಾಗಿ ಶಾಸಕರ ಭವನದಲ್ಲಿರುವ ವಾಹನಗಳ ಬಳಕೆಗೆ ಸಂಬಂಧಿಸಿದಂತೆ ಈ ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ. ಮಾರ್ಗಸೂಚಿಯಂತೆ ಇನ್ನು ಮುಂದೆ ಶಾಸಕರು ತಮ ವೈಯಕ್ತಿಕ ಸಹಾಯಕರು (ಪಿಎ), ಅತಿಥಿಗಳು ಅಥವಾ ಪರಿಚಯಸ್ಥರ ಬಳಕೆಗಾಗಿ ಶಾಸಕರ ಭವನದ ವಾಹನಗಳನ್ನು ಶಿಫಾರಸು ಮಾಡಲು ಅವಕಾಶ ಇರುವುದಿಲ್ಲ. ಶಾಸಕರ ಭವನದ ವಾಹನಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯೊಳಗೆ ಮಾತ್ರ ಬಳಸಬೇಕು. ತುರ್ತು ಪರಿಸ್ಥಿತಿ ಹೊರತುಪಡಿಸಿ ಬೆಂಗಳೂರಿನ ಹೊರಗೆ ವಾಹನಗಳನ್ನು ಕೊಂಡೊಯ್ಯಲು ಅವಕಾಶ ಇರುವುದಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ವಾಹನವನ್ನು ಹೊರ ಜಿಲ್ಲೆಗಳಿಗೆ ತೆಗೆದುಕೊಂಡು ಹೋಗಬೇಕಾದರೆ ವಿಧಾನಸಭಾಧ್ಯಕ್ಷರ ಪೂರ್ವಾನುಮತಿ ಕಡ್ಡಾಯವಾಗಿದೆ. ಶಾಸಕರ ಹೆಸರಿನಲ್ಲಿ ಅವರ ವೈಯಕ್ತಿಕ ಸಹಾಯಕರು, ಪಕ್ಷದ ಕಾರ್ಯಕರ್ತರು ಹಾಗೂ ಪರಿಚಯಸ್ಥರು ಶಿಫಾರಸು ಪತ್ರಗಳ ಮೂಲಕ ವಾಹನಗಳನ್ನು ಪಡೆದು ಹೊರ ಜಿಲ್ಲೆಗಳಿಗೆ ಬಳಸುತ್ತಿರುವ ಆರೋಪಗಳು ಕೇಳಿಬಂದಿದ್ದವು.ಇದರಿಂದ ಶಾಸಕರಿಗೆ ಅಗತ್ಯವಿದ್ದ ಸಂದರ್ಭದಲ್ಲಿ ವಾಹನಗಳ ಕೊರತೆ ಉಂಟಾಗುತ್ತಿತ್ತು ಎಂದು ಕಾರ್ಯಾಲಯ ತಿಳಿಸಿದೆ. ಮೂಲಗಳ ಪ್ರಕಾರ, ಶಾಸಕರ ಭವನದಲ್ಲಿ ಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರು ಸೇರಿದಂತೆ ಶಾಸಕರಿಗಾಗಿ ಸುಮಾರು 80 ವಾಹನಗಳು ಹಾಗೂ ವಿಧಾನ ಪರಿಷತ್ ಸದಸ್ಯರು ಮತ್ತು ಮಾಜಿ ಸದಸ್ಯರಿಗಾಗಿ ಸುಮಾರು 40 ವಾಹನಗಳು ಲಭ್ಯವಿವೆ. ಆದರೆ, ವಾಹನಗಳು ಹಾಗೂ ಚಾಲಕರ ಕೊರತೆಯಿರುವ ಹಿನ್ನೆಲೆಯಲ್ಲಿ ಶಾಸಕರ ಅಗತ್ಯಕ್ಕಾಗಿ ವಾಹನಗಳನ್ನು ಸದಾ ಸಿದ್ಧವಾಗಿಡಬೇಕಾಗುತ್ತದೆ. ವಿಮಾನ ನಿಲ್ದಾಣಕ್ಕೆ ತೆರಳುವುದನ್ನು ಹೊರತುಪಡಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಹೊರಗೆ ವಾಹನಗಳನ್ನು ಕಳುಹಿಸಲು ಅನುಮತಿ ಇರುವುದಿಲ್ಲ. ಶಾಸಕರಿಗೆ ಅಗತ್ಯವಿರುವಾಗ ವಾಹನಗಳು ಲಭ್ಯವಾಗುವಂತೆ ಈ ಕ್ರಮ ಕೈಗೊಳ್ಳಲಾಗಿದೆ. ವಾಹನ ಬಳಕೆಗೆ ಪ್ರತಿ ಕಿಲೋಮೀಟರ್‌ಗೆ 8ರೂ.ಗಳಿಂದ 12ರೂ.ವರೆಗೆ ಶುಲ್ಕ ವಿಧಿಸಲಾಗುತ್ತದೆ. ಹಾಲಿ ಶಾಸಕರಾದರೆ ಈ ಮೊತ್ತವನ್ನು ಅವರ ವೇತನದಿಂದ, ಮಾಜಿ ಶಾಸಕರಾದರೆ ಪಿಂಚಣಿಯಿಂದ ನೇರವಾಗಿ ಕಡಿತಗೊಳಿಸಲಾಗುತ್ತದೆ.

ಈಗಾಗಲೇ ನಗದುರಹಿತ (ಕ್ಯಾಶ್‌ಲೆಸ್) ವ್ಯವಸ್ಥೆ ಜಾರಿಯಲ್ಲಿದ್ದು, ವಾಹನ ಬಳಕೆಯ ವೆಚ್ಚ ನೇರವಾಗಿ ಸಂಬಂಧಿಸಿದ ಶಾಸಕರ ವೇತನ ಅಥವಾ ಪಿಂಚಣಿಯಿಂದ ಕಡಿತವಾಗಲಿದೆ. ಇದರಿಂದ ತಮ ಹೆಸರಿನಲ್ಲಿ ಯಾರು ವಾಹನ ಬಳಸಿದ್ದಾರೆ ಎಂಬ ಮಾಹಿತಿ ಶಾಸಕರಿಗೆ ಸುಲಭವಾಗಿ ತಿಳಿಯಲಿದೆ ಎಂದು ವಿಧಾನಸಭೆ ಕಾರ್ಯಾಲಯದ ಮೂಲಗಳು ತಿಳಿಸಿವೆ.

# ದತ್ತಾತ್ರೇಯ ದೇವಸ್ಥಾನ ಅರ್ಚಕರ ನಿಯೋಗ ಮುಖ್ಯಮಂತ್ರಿಗೆ ಭೇಟಿ

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ದೇವಲ ಗಾಣಗಾಪುರದ ದತ್ತಾತ್ರೇಯ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ವಿಶೇಷ ಆದ್ಯತೆ ನೀಡಲಿದ್ದು, ಅಗತ್ಯ ಮೂಲಸೌಕರ್ಯ ಕಲ್ಪಿಸಲು ಶೀಘ್ರವೇ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.**

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಕಾಮಗಾರಿಗಳು ಹಾಗೂ ಬರ ಪರಿಸ್ಥಿತಿಯ ಪರಿಶೀಲನೆಗಾಗಿ ಕಲಬುರಗಿಗೆ ಆಗಮಿಸಿದ್ದ ಅವರು, ನಗರದ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಅವರ ನಿವಾಸದಲ್ಲಿ ದೇವಲ ಗಾಣಗಾಪುರದ ದತ್ತಾತ್ರೇಯ ದೇವಸ್ಥಾನದ ಅರ್ಚಕರ ನಿಯೋಗವನ್ನು ಮುಖ್ಯಮಂತ್ರಿ ಭೇಟಿ ಮಾಡಿ ಮನವಿ ಸಲ್ಲಿಸಿದರು ದೇವಸ್ಥಾನದ ಸಾಲಕಾರಿ ಕಾರ್ಯದರ್ಶಿ ಪ್ರಿಯಾಂಕ್ ಭಟ್ ಪೂಜಾರಿ ನೇತೃತ್ವದ ನಿಯೋಗವು ಮುಖ್ಯಮಂತ್ರಿಗಳಿಗೆ ದತ್ತ ಮಹಾರಾಜರ ಭಾವಚಿತ್ರ, ಅಷ್ಟಗಂಧ ಹಾಗೂ ಮಹಾಪ್ರಸಾದವನ್ನು ನೀಡಿ ಗೌರವ ಸಲ್ಲಿಸಿತು. ಇದೇ ವೇಳೆ ಕ್ಷೇತ್ರದ ಅಭಿವೃದ್ಧಿ,



ಯಾತ್ರಿಕರ ಸೌಲಭ್ಯಗಳ ವಿಸ್ತರಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಮನವಿಯನ್ನು ಅರ್ಚಕರು ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, "ನಾನು ದತ್ತ ಮಹಾರಾಜರ ಭಕ್ತನಾಗಿದ್ದೇನೆ. ದೇವಲ ಗಾಣಗಾಪುರದ ಮಹತ್ವ ನನಗೆ ತಿಳಿದಿದೆ. ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ವಿಶೇಷ ಆದ್ಯತೆ ನೀಡಲಿದ್ದು, ಅಗತ್ಯ ಯೋಜನೆಗಳನ್ನು ರೂಪಿಸಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು" ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, "ದೇವಲ ಗಾಣಗಾಪುರವು ದೇಶದ ಮೂಲೆಮೂಲೆಗಳಿಂದ ಲಕ್ಷಾಂತರ ಭಕ್ತರನ್ನು ಆಕರ್ಷಿಸುವ ಪವಿತ್ರ ಕ್ಷೇತ್ರವಾಗಿದೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ದೇವಲ ಗಾಣಗಾಪುರಕ್ಕೆ ಕರೆದುಕೊಂಡು ಹೋಗಿ, ಸ್ಥಳದಲ್ಲೇ ಅಭಿವೃದ್ಧಿ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮಗಳಿಗೆ ಚಾಲನೆ ನೀಡಲಾಗುವುದು" ಎಂದು ತಿಳಿಸಿದರು. ಸಭೆಯಲ್ಲಿ ಅರ್ಚಕರಾದ ಪ್ರಿಯಾಂಕ ಪೂಜಾರಿ, ಅನಿರುದ್ಧ ಪೂಜಾರಿ ಸೇರಿದಂತೆ ದೇವಸ್ಥಾನದ ಹಲವು ಅರ್ಚಕರು ಉಪಸ್ಥಿತರಿದ್ದರು. ದೇವಲ ಗಾಣಗಾಪುರದ ರಸ್ತೆ, ಯಾತ್ರಿಕರ ಸೌಲಭ್ಯ, ಸ್ವಚ್ಛತೆ, ಕುಡಿಯುವ ನೀರು, ವಸತಿ ಹಾಗೂ ಇತರೆ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರದ ಭರವಸೆ ದೊರೆತಿರುವುದು ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಭಕ್ತರಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ.

# ಆನಂದ ಹೋಟೇಲ್ ಬಳಿ ದಿನಾಲೂ ಟ್ರಾಫಿಕ್ ಸಮಸ್ಯೆ ಪೊಲೀಸರಿಗೆ ಹಿಡಿದಾಪ ಹಾಕು ಇರುವ ಸಾರ್ವಜನಿಕರು



ನೈಜ್ಯ ದೆಸೆ ನ್ಯೂಸ್

**ಕಲಬುರಗಿ:ನಗರದಪ್ರಮುಖರಸ್ತೆಗಳಲ್ಲಿಒಂದಾದ ಖಕ ಕಾಲೇಜ್ ಆನಂದ್ ಹೋಟೆಲ್ ಬಳಿ ಟ್ರಾಫಿಕ್ ಸಮಸ್ಯೆಗಳಿಂದ ನಿತ್ಯ ಸಾರ್ವಜನಿಕರು ಗಂಟೆಗಳ ಕಾಲ ನಿಲ್ಲುವಂತೆ ಆಗಿದೆ.**

ಬೆಳೆಯುತ್ತಿರುವ ನಗರದಲ್ಲಿ ಸಾರ್ವಜನಿಕರ ರಸ್ತೆಗಳು ಚಿಕ್ಕದಾಗಿದ್ದು ಮತ್ತು ಇರುವ ರಸ್ತೆಗಳನ್ನು ಅತಿಕ್ರಮಣ ಮಾಡಲಾಗಿದೆ ಎಂಬುವುದು ಒಂದು ಬಹು ದಿನಗಳ ಸಮಸ್ಯೆ ನಗರದಲ್ಲಿ ಮೊದಲು ಪ್ರಮುಖ ರಸ್ತೆ ಯಾವುದು ಎಂದು ಸಾರ್ವಜನಿಕರಿಗೆ ಕೇಳಿದ್ರೆ ಜಗತವೃತ ದಿಂದ ತಿಮ್ಮಾಪುರಿ ವೃತ ಎಂಬ ಮಾತನಾಡುತಿದರು ಆದರೆ ಇವಾಗ ನಗರದ ನಾಲ್ಕು ದಿಕ್ಕುಗಳಲ್ಲಿ ಎಲ್ಲ ರಸ್ತೆಗಳು ಪ್ರಮುಖವಾಗಿವೆ ನಗರ ಕಳೆದ 10 ವರ್ಷಗಳಲ್ಲಿ ಸಾಕಷ್ಟು ಬೆಳೆದಿದ್ದು ಇದರ ಅನುಗುಣವಾಗಿ ಯಾವುದೇ ರಸ್ತೆಗಳೇ ಇಲ್ಲ ಎಂಬುವುದು ಬೇಜಾರದ ಸಂಗತಿ.

ಈ ರಸ್ತೆಗೆ ಹೊಂದಿಕೊಂಡು ಸಾಕಷ್ಟು ಬಡಾವಣೆಗಳು ಇದ್ದು,ಇದೆ ರಸ್ತೆಯಲ್ಲಿ ಜಿಲ್ಲೆಯ ಪ್ರಮುಖ ಶಾಲಾ ಕಾಲೇಜುಗಳು ಇದ್ದಾವೆ ಶರಣಬಸವೇಶ್ವರ ಶಾಲಾ ಕಾಲೇಜು,ನೂತನ ವಿದ್ಯಾಲಯ ಶಿಕ್ಷಣ ಸಂಸ್ಥೆ, ಸಂತ ಮೇರಿ ಮತ್ತು ಸಂತ ಜೋಸೆಫ ಕಾಲೇಜುಗಳು ಸೇರಿದಂತೆ ಹಲವು ಖಾಸಗಿ ಶಾಲಾ ಕಾಲೇಜುಗಳು ವಿದ್ಯಾರ್ಜನೆ ಮಾಡ್ತಾ ಇದ್ದಾವೆ, ಇದರಿಂದ ಆಗಿ ದಿನನಿತ್ಯ ಓಡಾಡುವ ಸಾರ್ವಜನಿಕರಿಗೆ ಶಾಲಾ ಕಾಲೇಜು ವಿಧ್ಯಾರ್ಥಿಗಳಿಗೆ ಬೆಳ್ಳಿಗೆ ಮತ್ತು ಸಂಜೆಯ ಸಮಯದಲ್ಲಿ ಸಾಕಷ್ಟು ಟ್ರಾಫಿಕ್ ಸಮಸ್ಯೆಗಳು ಎದುರಾಗುತ್ತವೆ, ಇದೆ ರಸ್ತೆಯಲ್ಲಿ ಸಾರಿಗೆ ಬಸ್ಸುಗಳು ಸಹ ಸಂಚಾರ ಮಾಡುತ್ತವೆ,

ದೊಡ್ಡ ಗಾತ್ರದ ಬಸಗಳು ಬಂದರೆ ಫ್ರೀ ಲೆಫ್ಟ್ ಇಲ್ಲದೆ ಮತ್ತು ಹಿಂದೆ ಮುಂದೆ ಸರಿಯಲು ಜಾಗ ಇಲ್ಲದೆ ಅಲ್ಲೇ ನಿಲ್ಲುತ್ತವೆ, ಇದರಿಂದ ಗಂಟೆಗಟ್ಟಲ್ಲೇ ಟ್ರಾಫಿಕ್ ಜಾಮ್ ಆಗಿ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ, ಪೊಲೀಸ್ ಇಲಾಖೆ ಕೆಲವು ವೃತ್ತಗಳಲ್ಲಿ ಸಿಗ್ನಲ್ ಅಳವಡಿಸಿದ್ದು ಅವು ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ ಎಂಬುವಂತೆ ಆಗಿವೆ,ಇನ್ನೂ ಪೊಲೀಸ್ ಇಲಾಖೆಯ ಸಿಬ್ಬಂದಿಗಳು ಅಲ್ಲಲ್ಲಿ ನಿಂತು ಕೊಂಡು ದಂಡ ಹಾಕುವುದು ಮಾಡ್ತಾರೆ ಬದಲಾಗಿ ಸಿಗ್ನಲಗಳನ್ನು ದುರಸ್ತಿ ಮಾಡಿ ಅವುಗಳು ಕಾರ್ಯನಿರ್ವಹಿಸುವ ಹಾಗೆ ಮಾಡಿದ್ರೆ ಮತ್ತು ಪ್ರತಿ ಸಿಗ್ನಲ್ ಗೆ ಒಬ್ಬರನ್ನು ನಿಯೋಜನೆ ಮಾಡಿದ್ರೆ ಟ್ರಾಫಿಕ್ ಸಮಸ್ಯೆ ಬಗೆಹರಿಸಬಹುದು ಎಂಬುವುದು ಸಾರ್ವಜನಿಕರ ಅಸೆ ಎಲ್ಲದಕ್ಕೂ ಕ್ರಮ ಕೈಗೊಳ್ಳುವ ನಗರದ ಪೊಲೀಸ್ ಆಯುಕ್ತರು ಇದರ ಕುರಿತು ಗಮನ ಹರಿಸಬೇಕು ಎಂಬುದು ಸಾರ್ವಜನಿಕ ಅಭಿಪ್ರಾಯ,ಆಗಿದೆ

# ಪಶ್ಚಿಮ ಬಂಗಾಳ : ಬಾಲಕಿ ಅತ್ಯಾಚಾರ–ಕೊಲೆ ಪ್ರಕರಣ, ಎನ್‌ಕೌಂಟರ್‌ನಲ್ಲಿ ಅತ್ಯಾಚಾರಿ ಫಿನಿಷ್

ನೈಜ್ಯ ದೆಸೆ ನ್ಯೂಸ್

**ಕೋಲ್ಕತ್ತಾ: ಪಶ್ಚಿಮ ಬಂಗಾಳದ ಬರೂಯಿಪುರದಲ್ಲಿ 11 ವರ್ಷದ ಬಾಲಕಿಂ–ು ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗಳಲ್ಲಿ ಒಬ್ಬನನ್ನು ಇಂದು ಮುಂಜಾನೆ ಅಪರಾಧ ಸ್ಥಳ ಪುನರ್ನಿರ್ಮಾಣ ಕಾರ್ಯಾಚರಣಾ ಸಮಯದಲ್ಲಿ ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ನಂತರ ಎನ್‌ಕೌಂಟರ್‌ನಲ್ಲಿ ಕೊಲ್ಲಲಾಗಿದೆ.**

ಪ್ರಭಾಸ್ ಮೊಂಡಲ್ ಎಂದು ಗುರುತಿಸಲಾದ ಆರೋಪಿಯನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಯಿತು ಮತ್ತು ಸಿಸಿಟಿವಿ ದೃಶ್ಯಾವಳಿಗಳು ಅಪ್ರಾಪ್ತ ವಯಸ್ಕ ಬಾಲಕಿ ಕಾಣೆಯಾಗುವ ಸ್ವಲ್ಪ ಸಮಯದ ಮೊದಲು ಅವನು ಜೊತೆ ಇದ್ದಾನೆ ಎಂದು ಹೇಳಲಾದ ನಂತರ ಪ್ರಮುಖ ಶಂಕಿತರಲ್ಲಿ ಒಬ್ಬನೆಂದು ಪರಿಗಣಿಸಲಾಗಿದೆ. ಪೊಲೀಸರ ಪ್ರಕಾರ, ತನಿಖೆಯ ಭಾಗವಾಗಿ ಅಪರಾಧ ಸ್ಥಳ ಪುನರ್ನಿರ್ಮಾಣಕ್ಕಾಗಿ ಮೊಂಡಲ್‌ನನ್ನು ದಕ್ಷಿಣ 24 ಪರಗಣ ಜಿಲ್ಲೆಯ ಸೂರ್ಯಪುರಕ್ಕೆ ಬೆಳಿಗ್ಗೆ 12.45 ರ ಸುಮಾರಿಗೆ ಕರೆದೊಯ್ಯಲಾಯಿತು.





ಈ ಕಾರ್ಯಾಚರಣಾ ಕಾರ್ಯಾಚರಣಾ ಕಾರ್ಯದ ಸಮಯದಲ್ಲಿ, ಅವನು ಇದ್ದಕ್ಕಿದ್ದಂತೆ ಒಬ್ಬ ಪೊಲೀಸ್ ಅಧಿಕಾರಿಯಿಂದ ಸರ್ವಿಸ್ ಬಂದೂಕನ್ನು ಕಸಿದುಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಅವನು ಪೊಲೀಸ್ ತಂಡದ ಮೇಲೆ ಒಂದು ಸುತ್ತು ಗುಂಡು ಹಾರಿಸಿದನು. ಪೊಲೀಸರು ಆತ್ಮರಕ್ಷಣೆಗಾಗಿ ಪ್ರತಿದಾಳಿ ನಡೆಸಿದರು, ಇದರಲ್ಲಿ ಅವನಿಗೆ ಗುಂಡು ಗಾಯವಾಯಿತು ಎಂದು ಅಧಿಕಾರಿ ಹೇಳಿದರು.

ಮೊಂಡಲ್ ಅವರನ್ನು ಬರುಯಿಪುರ ಉಪ–ವಿಭಾಗೀಯ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಅಲ್ಲಿ ವೈದ್ಯರು ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಿದರು. ಮೊಂಡಲ್ ವಿಚಾರಣೆಯ ಸಮಯದಲ್ಲಿ ತನಿಖಾಧಿಕಾರಿಗಳನ್ನು ದಾರಿ ತಪ್ಪಿಸುತ್ತಿದ್ದರು ಮತ್ತು ತನಿಖೆಗೆ ಸಹಕರಿಸಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ, ಇದರಿಂದಾಗಿ ಘಟನೆಗಳ ಅನುಕ್ರಮ ಮತ್ತು ಅಪರಾಧದಲ್ಲಿ ಅವರ ಪಾತ್ರವನ್ನು ಖಚಿತಪಡಿಸಿಕೊಳ್ಳಲು ತನಿಖಾ ತಂಡವು ಅಪರಾಧದ ಸ್ಥಳವನ್ನು ಪುನರ್ನಿರ್ಮಿಸಲು ಪ್ರಾರಂಭಿಸಿತು.

ಜುಲೈ 4 ರಂದು ನಾಪತ್ತೆಯಾಗಿದ್ದ ಹುಡುಗಿಯ ಶವವನ್ನು ಮರುದಿನ ಸುರ್ಜ್ಯಪುರ ಹಾತ್ ಪ್ರದೇಶದ ಕೊಳದಿಂದ ಪತ್ತೆಯಾಗಿದೆ.ಆಕೆಯ ಶವವನ್ನು ಗೋಣಿಚೀಲದಲ್ಲಿ ಎಸೆಯುವ ಮೊದಲು ಆಕೆಯ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಲಾಗಿದೆ ಎಂದು ಪೊಲೀಸರು ಆರೋಪಿಸಿದ್ದಾರೆ.ಈ ಘಟನೆಯು ವ್ಯಾಪಕ ಆಕ್ರೋಶಕ್ಕೆ ಕಾರಣವಾಯಿತು, ಕೋಪಗೊಂಡ ಸ್ಥಳೀಯರು ಬರುಯಿಪುರ–ಜಾಯ್ನಗರ ರಸ್ತೆಯನ್ನು ತಡೆದು, ಟೈರ್‌ಗಳಿಗೆ ಬೆಂಕಿ ಹಚ್ಚಿ, ಪೊಲೀಸ್ ವಾಹನಗಳನ್ನು ಧ್ವಂಸಗೊಳಿಸಿದರು, ತಕ್ಷಣ ಬಂಧಿಸಿ ಮತ್ತು ಹೊಣೆಗಾರರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ್ದರು.

# 70 ವರ್ಷಗಳ ಬಳಿಕ ವಿಶ್ವಕಪ್ ಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ ಸ್ವಿಟ್ಜರ್ಲೆಂಡ್

ನೈಜ್ಯ ದೆಸೆ ನ್ಯೂಸ್

**ವ್ಯಾಂಕೂವರ್: ರೋಚಕ ಪೆನಾಲ್ಟಿ ಶೂಟೌಟ್‌ನಲ್ಲಿ ಕೊಲಂಬಿಯಾವನ್ನು 4–3 ಗೋಲುಗಳಿಂದ ಮಣಿಸಿದ ಸ್ವಿಟ್ಜರ್ಲೆಂಡ್, ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ 70 ವರ್ಷಗಳ ಬಳಿಕ ಪ್ರವೇಶಿಸಿದೆ.ನಿಗದಿತ ಸಮಯ ಹಾಗೂ ಹೆಚ್ಚುವರಿ ಸಮಯದಲ್ಲೂ ಉಭಯ ತಂಡಗಳು ಗೋಲು ಗಳಿಸಲು ವಿಫಲವಾದ ಕಾರಣ ಪಂದ್ಯ ಪೆನಾಲ್ಟಿ ಶೂಟೌಟ್‌ಗೆ ತಲುಪಿತು.**

ಶೂಟೌಟ್‌ನಲ್ಲಿ ರೂಬೆನ್ ವರ್ಗಾಸ್ ನಿರ್ಣಾಯಕ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸುವ ಮೂಲಕ ಸ್ವಿಟ್ಜರ್ಲೆಂಡ್‌ಗೆ 4–3 ಅಂತರದ ಗೆಲುವು ತಂದುಕೊಟ್ಟರು.ಕ್ವಾರ್ಟರ್‌ಫೈನಲ್‌ನಲ್ಲಿ ಸ್ವಿಟ್ಜರ್ಲೆಂಡ್ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ. ಮತ್ತೊಂದೆಡೆ ಅರ್ಜೆಂಟೀನಾ ಮತ್ತೊಂದು ಪಂದ್ಯದಲ್ಲಿ ಈಜಿಪ್ಟ್ ತಂಡವನ್ನು 3–2 ಗೋಲುಗಳಿಂದ ಸೋಲಿಸಿ ಅಂತಿಮ ಎಂಟರ ಘಟ್ಟಕ್ಕೇರಿದೆ. 1954ರಲ್ಲಿ ಆತಿಥ್ಯ ವಹಿಸಿದ್ದ ವಿಶ್ವಕಪ್‌ನಲ್ಲಿ



ಕೊನೆಯ ಬಾರಿಗೆ ಕ್ವಾರ್ಟರ್‌ಫೈನಲ್ ತಲುಪಿದ್ದ ಸ್ವಿಟ್ಜರ್ಲೆಂಡ್, ಇದೀಗ 70 ವರ್ಷಗಳ ಬಳಿಕ ಮತ್ತೆ ಈ ಸಾಧನೆ ಮಾಡಿದೆ.ಪಂದ್ಯದ ವೇಳೆ ಗಾಯಗೊಂಡಿದ್ದ ಯುವ ಮಿಡ್‌ಫೀಲ್ಡರ್ ಜೋಹಾನ್ ಮಂಜಾಂಬಿ ತಂಡದಲ್ಲಿ ಇರಲಿಲ್ಲ.

ರೂಬೆನ್ ವರ್ಗಾಸ್ ಕೂಡ ತರಬೇತಿ ವೇಳೆ ಅಸ್ವಸ್ಥಗೊಂಡಿದ್ದರೂ, ನಿಯಮಿತ ಸಮಯದ ಕೊನೆಯಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದರು. ಶೂಟೌಟ್‌ನಲ್ಲಿ ಕೊಲಂಬಿಯಾದ ಡೇವಿನ್ಸನ್ ಸಾಂಚೆಜ್ ಹೊಡೆದ ಪೆನಾಲ್ಟಿ ಕ್ರಾಸ್‌ಬಾರ್‌ಗೆ ತಾಗಿ ಹೊರಬಿದ್ದರೆ, ಕುಚೊ ಹೆರ್ನಾಂಡೆಜ್ ಅವರ ಪ್ರಯತ್ನವನ್ನು ಸ್ವಿಸ್ ಗೋಲ್‌ಕೀಪರ್ ಗ್ರೆಗರ್ ಕೋಬೆಲ್ ಅದ್ಭುತವಾಗಿ ತಡೆದಾಗ ಜಯ ಸಿಕಿತು. ವ್ಯಾಂಕೂವರ್‌ನ ಬಿಸಿ ಪ್ಲೇಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯವನ್ನು 52,497 ಪ್ರೇಕ್ಷಕರು ವೀಕ್ಷಿಸಿದರು. ಬಹುತೇಕ ಅಭಿಮಾನಿಗಳು ಹಳದಿ ಬಣ್ಣದ ಉಡ–ುಪು ಧರಿಸಿ ಕೊಲಂಬಿಯಾ ತಂಡಕ್ಕೆ ಬೆಂಬಲ ಸೂಚಿಸಿದ್ದರು. ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಕೂಡ ಪಂದ್ಯ ವೀಕ್ಷಕರಲ್ಲಿ ಉಪಸ್ಥಿತರಿದ್ದರು.

ಕೊಲಂಬಿಯಾ ಅಭಿಮಾನಿಗಳ ಭಾರೀ ಬೆಂಬಲದ ನಡುವೆಯೂ ನಾವು ಮಾನಸಿಕ ದೃಢತೆ ಕಾಪಾಡಿಕೊಂಡೆವು. ಕೆಲವು ಪ್ರಮುಖ ಆಟಗಾರರ ಅನುಪಸ್ಥಿತಿಯ ನಡುವೆಯೂ ತಂಡ ಉತ್ತಮ ಪ್ರದರ್ಶನ ನೀಡಿತು, ಎಂದು ಗೋಲ್‌ಕೀಪರ್ ಗ್ರೆಗರ್ ಕೋಬೆಲ್ ಹೇಳಿದರು. 2022ರ ವಿಶ್ವಕಪ್‌ಗೆ ಅರ್ಹತೆ ಪಡೆಯಲು ವಿಫಲವಾಗಿದ್ದ ಕೊಲಂಬಿಯಾ, 2014ರ ವಿಶ್ವಕಪ್‌ನಲ್ಲಿ ಕ್ವಾರ್ಟರ್‌ಫೈನಲ್ ತಲುಪಿತ್ತು. ಆದರೆ ಈ ಬಾರಿ ಅಂತಿಮ 16ರ ಹಂತದಲ್ಲೇ ತನ್ನ ಅಭಿಯಾನ ಮುಗಿಸಬೇಕಾಯಿತು.ನಮ ಕನಸು ಬಹಳ ದೊಡ್ಡದಾಗಿತ್ತು. ಇಡೀ ದೇಶ ನಮ್ಮ ಮೇಲೆ ವಿಶ್ವಾಸ ಇಟ್ಟಿತ್ತು.

ಆದ್ದರಿಂದ ಈ ಸೋಲು ಇನ್ನಷ್ಟು ನೋವು ತಂದಿದೆ, ಎಂದು ಕೊಲಂಬಿಯಾ ಮಿಡ್‌ಫೀಲ್ಡ್ ಜಾನ್ ಅರಿಯಾಸ್ ಹೇಳಿದರು. ಸ್ವಿಟ್ಜರ್ಲೆಂಡ್‌ನ ಕೋಚ್ ಮುರಾತ್ ಯಾಕಿನ್, ನಾವು ತುಂಬಾ ಶ್ರಮಪಟ್ಟಿದ್ದೇವೆ. ಈಗ ಹಾಲಿ ಚಾಂಪಿಯನ್ ಅರ್ಜೆಂಟೀನಾ ವಿರುದ್ಧ ಕ್ವಾರ್ಟರ್‌ಫೈನಲ್‌ನಲ್ಲಿ ಆಡಲಿದ್ದೇವೆ. ಇದು ನಮಗೆ ಅತ್ಯಂತ ವಿಶೇಷ ಕ್ಷಣ, ಎಂದು ಸಂತಸ ವ್ಯಕ್ತಪಡಿಸಿದರು.ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ಸಂಘಟಿತ ಮತ್ತು ಕ್ರಮಬದ್ಧ ಆಟ ಪ್ರದರ್ಶಿಸಿದರೆ, ಕೊಲಂಬಿಯಾ ಆಕ್ರಮಣಕಾರಿ ಹಾಗೂ ದೈಹಿಕ ಆಟಕ್ಕೆ ಒತ್ತು ನೀಡಿತು.

ಚೆಂಡಿನ ನಿಯಂತ್ರಣದಲ್ಲಿ ಸ್ವಿಟ್ಜರ್ಲೆಂಡ್‌ಗೆ ಸ್ವಲ್ಪ ಮೇಲುಗೈ ಇತ್ತು. ಹೆಚ್ಚುವರಿ ಸಮಯದಲ್ಲಿ ಕೊಲಂಬಿಯಾದ ಜಾನ್ ಲುಕುಮಿ ಅವರ ಹೆಡರ್ ಕ್ರಾಸ್‌ಬಾರ್‌ಗೆ ತಾಗಿ ಹೊರಬಿದ್ದಿದ್ದು ತಂಡದ ಅತ್ಯುತ್ತಮ ಅವಕಾಶವಾಗಿತ್ತು. ಆದರೆ ಕೊನೆಗೆ ಪೆನಾಲ್ಟಿ ಶೂಟೌಟ್‌ನಲ್ಲಿ ಸ್ವಿಸ್ ಆಟಗಾರರು ಮೇಲುಗೈ ಸಾಧಿಸಿ ಐತಿಹಾಸಿಕ ಗೆಲುವು ದಾಖಲಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಎಸ್ಸಿ. (B.Sc.) ನ್ಯೂಟ್ರಿಷನ್ ಮತ್ತು ಡಯೆಟಿಕ್ಸ್

ಬಿ.ಎಸ್ಸಿ. (B.Sc.) ನ್ಯೂಟ್ರಿಷನ್ ಮತ್ತು ಡಯೆಟಿಕ್ಸ್ ಎನ್ನುವುದು ಆಹಾರ ವಿಜ್ಞಾನ ಮತ್ತು ಮಾನವ ಪೋಷಣೆಯ ಬಗ್ಗೆ ಅಧ್ಯಯನ ಮಾಡುವ 3 ರಿಂದ 4 ವರ್ಷಗಳ ಪದವಿಪೂರ್ವ ಕೋರ್ಸ್ ಆಗಿದೆ. ಇದು ಆರೋಗ್ಯ, ಆಹಾರ ಯೋಜನೆ ಮತ್ತು ರೋಗಿಗಳಿಗೆ ಅಗತ್ಯವಿರುವ ಪೌಷ್ಟಿಕ ಆಹಾರಗಳ ನಿರ್ವಹಣೆಯ ಬಗ್ಗೆ ಪ್ರಾಯೋಗಿಕ ಮತ್ತು ತಾತ್ವಿಕ ಜ್ಞಾನವನ್ನು ನೀಡುತ್ತದೆ.ಈ ಕೋರ್ಸ್‌ನ ಪ್ರಮುಖ ವಿವರಗಳು ಈ ಕೆಳಗಿನಂತಿವೆ:ಅರ್ಹತೆ (Eligibility):ವಿಜ್ಞಾನ ವಿಭಾಗದಲ್ಲಿ (PCB/PCMB) ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ. 50 ಅಂಕಗಳನ್ನು ಪಡೆದಿರಬೇಕು.ಕಾಲಾವಧಿ (Duration):ಇದು ಸಾಮಾನ್ಯವಾಗಿ 6 ಸೆಮಿಸ್ಟರ್‌ಗಳನ್ನು ಒಳಗೊಂಡಿರುವ 3 ವರ್ಷಗಳ ಕೋರ್ಸ್ ಆಗಿದೆ. ಆದರೆ ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ ಕೆಲವು ವಿಶ್ವವಿದ್ಯಾಲಯಗಳಲ್ಲಿ ಇದನ್ನು 4 ವರ್ಷಗಳ ಪದವಿಯಾಗಿ ನೀಡಲಾಗುತ್ತಿದೆ.ಕಲಿಯುವ ವಿಷಯಗಳು (Core Subjects):ಆಹಾರ ವಿಜ್ಞಾನ (Food Science)ಮಾನವ ಪೋಷಣೆ (Human Nutrition)ಕ್ಲಿನಿಕಲ್ ನ್ಯೂಟ್ರಿಷನ್ ಮತ್ತು ಡಯೆಟಿಕ್ಸ್ (Clinical Nutrition & Dietetics)ಪಬ್ಲಿಕ್ ಹೆಲ್ತ್ ನ್ಯೂಟ್ರಿಷನ್ (Public Health Nutrition)ಆಹಾರ ಸಂರಕ್ಷಣೆ ಮತ್ತು ಸೂಕ್ಷ್ಮ ಜೀವವಿಜ್ಞಾನ (Food Preservation & Microbiology)ಉದ್ಯೋಗಾವಕಾಶಗಳು (Career Opportunities):ಪದವಿ ಮುಗಿದ ನಂತರ ನೀವು ಈ ಕೆಳಗಿನ ಕ್ಷೇತ್ರಗಳಲ್ಲಿ ಕೆಲಸ ಮಾಡಬಹುದು:ಆಸ್ಪತ್ರೆಗಳಲ್ಲಿ ಡಯೆಟಿಷಿಯನ್ ಅಥವಾ ನ್ಯೂಟ್ರಿಷನಿಸ್ಟ್ಫಿಟ್‌ನೆಸ್ ಮತ್ತು ವೆಲ್‌ನೆಸ್ ಕ್ಲಿನಿಕ್‌ಗಳುಆಹಾರ ಸಂಸ್ಕರಣಾ ಕೈಗಾರಿಕೆಗಳು (Food Processing Industries)ಹೋಟೆಲ್ ಮತ್ತು ಹಾಸ್ಪಿಟಾಲಿಟಿ ಉದ್ಯಮ.

1ನೇ ಪುಟದಿಂದ....

ಎಕರೆ ಹಾಗೂ ಬುಂಕಲದೊಡ್ಡಿ ಗ್ರಾಮದಲ್ಲಿ 20 ಎಕರೆ ಜಮೀನನ್ನು ವಸತಿ ರಹಿತರಿಗೆ ಮೀಸಲಿಡಬೇಕು. ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ.) ರಾಜ್ಯ ಸಂಘಟನಾ ಸಂಚಾಲಕರಾದ ಹನುಮಂತಪ್ಪ ಕಾಕರಗಲ್ ಮಾತನಾಡಿ, "ಮುಂದಿನ 30 ದಿನಗಳೊಳಗೆ ಸರ್ಕಾರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ, ಆಗಸ್ಟ್ 15, 2026ರಂದು ತಾಲೂಕು ಮಟ್ಟದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು" ಎಂದು ಎಚ್ಚರಿಕೆ ನೀಡಿದರು. ಅಧಿಕಾರಿಗಳ ಸಂಪೂರ್ಣ ನಿರ್ಲಕ್ಷ ಧೋರಣೆ ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಅವರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕರಾದ ಶಿವಪ್ಪ ಪಲಕನಮರಡಿ, ಶಿವರಾಜ್ ಕೋರಿ ಗಣಜಲಿ, ಯೇಸು ಮಸರಕಲ್, ಹೈದರ್ ಅಲಿ ಪಲಕನಮರಡಿ, ಭೀಮಣ್ಣ ವೀರಗೋಟ, ಸಾಬಣ್ಣ ಕಮಲದಿನ್ನಿ, ಬೂದೆಪ್ಪ ಮ್ಯಾತ್ರಿ ಗಬ್ಬೂರು, ಬಾಳಪ್ಪ ಜಾಲಹಳ್ಳಿ, ರಮೇಶ್ ಬಾಗೂರು, ಹನುಮಂತ್ರಾಯ ನಾಯಕ್, ರಂಗಪ್ಪ ನಾಯಕ್, ತಿಮ್ಮನಗೌಡ ಪೊಲೀಸ್ ಪಾಟೀಲ್, ಹುಲ್ಲೇಶ್ ಕಾಕರಗಲ್, ರಮೇಶ್ ಬಾವಿಮನಿ, ನಾಗರಾಜ್ ಬೇರಿ ಅರಕೇರ, ಚೆನ್ನಮ್ಮ ಅರಕೇರ, ಶ್ರೀಮತಿ ಪಾರ್ವತಿ ಬಾಗೂರು, ನಾಗಮ್ಮ ಕ್ಯಾದಿಗೆರ, ಬಸವರಾಜ್ ಹುಲಿಗುಡ್ಡ, ರವಿಕುಮಾರ್, ಶಿವಪ್ಪ ಕಂಪೂರ್, ಎಲ್ಲಪ್ಪ ಮಲದಕಲ್, ಆಂಜನೇಯ ಅರಕೇರ, ಸಲೀಂ ಅರಕೇರ, ದಲಿತ ಮಹಿಳಾ ಘಟಕದ ಪದಾಧಿಕಾರಿಗಳು ಹಾಗೂ ನೂರಾರು ಸಾರ್ವಜನಿಕರು ಭಾಗವಹಿಸಿದ್ದರು.

ಪ್ರತಿಭಟನೆ ಸ್ಥಳಕ್ಕೆ ದೇವದುರ್ಗ ವೃತ್ತ ನಿರೀಕ್ಷಕರಾದ ಪುಂಡಲಿಕ್ ಸಾಹೇಬರು ಭೇಟಿ ನೀಡಿ ಪರಿಸ್ಥಿತಿಯ ಪರಿಶೀಲನೆ ನಡೆಸಿದರು. ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ವೈಶಾಲಿ ಜಳಕಿ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ದಕ್ಷಿಣ ಒಳನಾಡಿನಲ್ಲಿ ಮಳೆ ಕೊರತೆ, ಕರಾವಳಿಯಲ್ಲಿ ಅತೀವೃಷ್ಟಿ, ಬಯಲು ಸೀಮೆಯಲ್ಲಿ ಅನಾವೃಷ್ಟಿ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕರಾವಳಿ ಮತ್ತು ಮಲೆನಾಡಿನಲ್ಲಿ ಮಳೆ ಆರ್ಭಟ ಜೋರಾಗಿದ್ದು, ಅತಿವೃಷ್ಟಿ ಉಂಟಾಗಿದೆ. ಆದರೆ,ದಕ್ಷಿಣ ಒಳನಾಡಿನಲ್ಲಿ ಮಳೆ ಕೊರತೆಯಿಂದ ಅನಾವೃಷ್ಟಿಯಾಗಿದೆ.ಜೂನ್ ತಿಂಗಳಲ್ಲಿ ಉಂಟಾದ ಮಳೆ ಕೊರತೆಯು ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಜುಲೈನಲ್ಲೂ ಮುಂದುವರೆದಿದೆ. ಆದರೆ, ಈ ತಿಂಗಳ ಮೊದಲ ವಾರದಲ್ಲಿ ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ಮಳೆ ಪ್ರಮಾಣ ಹೆಚ್ಚಾಗಿದೆ. ಇದರಿಂದ ನದಿಗಳು ಮೈದುಂಬಿ ಹರಿಯ ತೊಡಗಿವೆ. ಜಲಾಶಯಗಳ ಒಳಹರಿವು ಹೆಚ್ಚಾಗತೊಡಗಿದೆ.**

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮಾಹಿತಿ ಪ್ರಕಾರ ಜುಲೈ ಒಂದರಿಂದ ನಿನ್ನೆಯವರೆಗೆ ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಶೇ.62 ರಷ್ಟು ಮಳೆ ಕೊರತೆಯಾಗಿದ್ದು, ಬರದ ಛಾಯೆ ಆವರಿಸತೊಡಗಿದೆ. ಕಳೆದೊಂದು ವಾರದಲ್ಲಿ 14 ಮಿ.ಮೀ. ವಾಡಿಕೆ ಮಳೆ ಪ್ರಮಾಣವಿದ್ದು, ಕೇವಲ 5 ಮಿ.ಮೀ.ನಷ್ಟು ಮಾತ್ರ ಮಳೆಯಾಗಿದೆ. ಜೂನ್ ತಿಂಗಳಲ್ಲೂ



ಶೇ.5ರಷ್ಟು ಮಳೆ ಅಭಾವ ಕಂಡುಬಂದಿತ್ತು. ಕಳೆದ ಒಂದು ವಾರದಲ್ಲಿ ರಾಜ್ಯದಲ್ಲಿ ಒಟ್ಟಾರೆ 58 ಮಿ.ಮೀ.ನಷ್ಟು ವಾಡಿಕೆ ಮಳೆಯಿದ್ದು, 62 ಮಿ.ಮೀ.ನಷ್ಟು ಮಳೆ ಬಿದ್ದಿದೆ.

ವಾಡಿಕೆಗಿಂತ ಶೇ.7 ರಷ್ಟು ಹೆಚ್ಚು ಮಳೆಯಾಗಿದೆ. ಕರಾವಳಿಯಲ್ಲಿ ಶೇ.27, ಮಲೆನಾಡು ಭಾಗದಲ್ಲಿ ಶೇ.10, ಉತ್ತರ ಒಳನಾಡಿನಲ್ಲಿ ಶೇ.17 ರಷ್ಟು ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಜೂನ್‌ನಿಂದ ನಿನ್ನೆಯವರೆಗೆ ರಾಜ್ಯದಲ್ಲಿ 257 ಮಿ.ಮೀ.ನಷ್ಟು ವಾಡಿಕೆ ಮಳೆ ಪ್ರಮಾಣವಿದ್ದು, 178 ಮಿ.ಮೀ.ನಷ್ಟು ಮಾತ್ರ ಮಳೆಯಾಗಿದ್ದು, ಶೇ.31ರಷ್ಟು ಮಳೆ ಕೊರತೆ ಕಂಡುಬಂದಿದೆ. ಕರಾವಳಿಯಲ್ಲಿ ಶೇ.32, ಮಲೆನಾಡಿನಲ್ಲಿ ಶೇ.40, ಉತ್ತರ ಒಳನಾಡಿನಲ್ಲಿ ಶೇ.21 ಹಾಗೂ ದಕ್ಷಿಣ ಒಳನಾಡಿನಲ್ಲಿ ಶೇ.15ರಷ್ಟು ಮಳೆ ಕೊರತೆ ಇದೆ. ಮುಂಗಾರು ಹಂಗಾಮಿನಲ್ಲಿ ಇದುವರೆಗೂ ರಾಜ್ಯದ 14 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ವಾಡಿಕೆ ಮತ್ತು ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದರೆ, 17 ಜಿಲ್ಲೆಗಳ 133 ತಾಲ್ಲೂಕುಗಳಲ್ಲಿ ಮಳೆ ಕೊರತೆಯಾಗಿದೆ.

ಜುಲೈ ತಿಂಗಳ ಮೊದಲ ವಾರದಲ್ಲೂ17 ಜಿಲ್ಲೆಗಳ 124 ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಬರದ ವಾತಾವರಣ ಕಂಡುಬರುತ್ತಿದೆ. 14 ಜಿಲ್ಲೆಗಳ 116 ತಾಲ್ಲೂಕುಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಇವು ಬಹುತೇಕ ಕರಾವಳಿ ಹಾಗೂ ಮಲೆನಾಡು ಭಾಗದ ಜಿಲ್ಲೆಗಳಾಗಿವೆ. ಜೂನ್ ತಿಂಗಳಲ್ಲೂ 13 ಜಿಲ್ಲೆಗಳ 89 ತಾಲ್ಲೂಕುಗಳಲ್ಲಿ ಮಾತ್ರ ವಾಡಿಕೆಗಿಂತ ಹೆಚ್ಚು ಮಳೆಯಾಗಿತ್ತು. 18 ಜಿಲ್ಲೆಗಳ 151 ತಾಲ್ಲೂಕುಗಳಲ್ಲಿ ಮಳೆ ಕೊರತೆ ಕಂಡು ಬಂದಿತ್ತು.

ಜೂನ್‌ನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಮಳೆ ಕೊರತೆ ಎದುರಿಸುತ್ತಿರುವ ಪ್ರದೇಶಗಲ್ಲೂ ಜುಲೈನಲ್ಲಿ ಮಳೆ ಅಭಾವ ಮುಂದುವರೆದು ಬರಪರಿಸ್ಥಿತಿ ಎದುರಿಸುವಂತಾಗಿದೆ.ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಭಾರಿ ಮಳೆ ಮುಂದುವರೆಯಲಿದ್ದು, ಒಳನಾಡಿನಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಗಳಿವೆ.

# ಅಂಬಾಭವಾನಿ ಭವನ ಯಾತ್ರಿ ನಿವಾಸ ಉದ್ಘಾಟನೆ ಹಾಗೂ ಗಣ್ಯರಿಗೆ ಸನ್ಮಾನ ಸಮಾರಂಭ




❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲ್ಲೂಕಿನ ಹನಮಸಾಗರದಲ್ಲಿರುವ ಅಂಬಾಭವಾನಿ ದೇವಸ್ಥಾನದ ಯಾತ್ರಿ ನಿವಾಸವನ್ನು ಶಾಸಕ ದೊಡ್ಡನಗೌಡ ಪಾಟೀಲ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಕೆ ಸಮಾಜವು ಸಾಮೂಹಿಕ ವಿವಾಹ ಹಾಗೂ ಉಪನಯನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕುವ ಉತ್ತಮ ಸಂಪ್ರದಾಯ ಬೆಳೆಸಿದೆ ಎಂದು ಶ್ಲಾಘಿಸಿದರು.**

ಸಮಾಜದ ಒಗ್ಗಟ್ಟಿನಿಂದ ಇಂತಹ ಬೃಹತ್ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯುತ್ತಿವೆ ಎಂದ ಅವರು, ಕುಷ್ಟಗಿಯ ಎಸ್‌ಎಸ್‌ಕೆ ಸಮಾಜದ ಅಂಬಾಭವಾನಿ ದೇವಸ್ಥಾನದ ನಿರ್ಮಾಣಕ್ಕೆ ?10 ಲಕ್ಷ ಅನುದಾನ ಬಿಡುಗಡೆ ಮಾಡಿರುವುದಾಗಿ ತಿಳಿಸಿ, ಹನಮಸಾಗರದ ದೇವಸ್ಥಾನದ ಅಭಿವೃದ್ಧಿಗೂ ಅಗತ್ಯ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ ಮಾತನಾಡಿ, ಸಮಾಜದವರು ಸಾಮೂಹಿಕ ವಿವಾಹಗಳಲ್ಲಿ ಪಾಲ್ಗೊಂಡರೆ ಸಾವಿರಾರು ಜನರ ಆಶೀರ್ವಾದ ದೊರೆಯುತ್ತದೆ. ಉಪನಯನವು ನಮ್ಮ ಸಂಸ್ಕಾರದ ಮೊದಲ ಪಾಠವಾಗಿದ್ದು, ಸಮಾಜದ ಅಭಿವೃದ್ಧಿಗೆ ತಮ್ಮಿಂದಲೂ ಅಗತ್ಯ ಅನುದಾನ ನೀಡುವುದಾಗಿ ಹೇಳಿದರು.

ದೊಡ್ಡಬಸವನಗೌಡ ಬಯ್ಯಾಪೂರ ಮಾತನಾಡಿ, ಯಾತ್ರಿ ನಿವಾಸ ನಿರ್ಮಾಣಕ್ಕೆ ತಮ್ಮ ಸಹೋದರ ಎಂ.ಎಲ್.ಸಿ. ಶರಣೇಗೌಡ ಬಯ್ಯಾಪೂರ ಅವರು ?40 ಲಕ್ಷ ಅನುದಾನ ನೀಡಿರುವುದು ಸಮಾಜಕ್ಕೆ ಹೆಮ್ಮೆಯ ಸಂಗತಿ. ಸಮಾಜದ ಅಭಿವೃದ್ಧಿಗೆ ಸದಾ ಸಹಕಾರ ನೀಡುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಎಸ್‌ಎಸ್‌ಕೆ ಸಮಾಜದ ರಾಜ್ಯಾಧ್ಯಕ್ಷ ಶಶಿಕುಮಾರ್ ಮೇರವಾಡೆ, ಯುವ ಮುಖಂಡ ವೆಂಕಟೇಶ ಕಾಟವಾ, ಧರ್ಮದರ್ಶಿ ಸತೀಶ ಮೇರವಾಡೆ, ಗೋಪಾಲ ಆಚಾರ್ಯ, ಸಮಾಜದ ಮುಖಂಡ ಹನುಮಂತಸಾ ನಿರಂಜನ ಸೇರಿದಂತೆ ಹಲವರು ಮಾತನಾಡಿ ಸಮಾಜದ ಕಾರ್ಯವನ್ನು ಶ್ಲಾಘಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಾಜದ ಅಧ್ಯಕ್ಷ ಭಗೀರಥಸಾ ಪಾಟೀಲ, ಅಂಬಾಭವಾನಿ ದೇವಸ್ಥಾನದ 87ನೇ ವರ್ಷದ ಆಚರಣೆ ಅಂಗವಾಗಿ ಸಾಮೂಹಿಕ ವಿವಾಹ ಮತ್ತು ಉಪನಯನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಬಡ ಕುಟುಂಬಗಳಿಗೆ ಇದರಿಂದ ಹೆಚ್ಚಿನ ಅನುಕೂಲವಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಯಶಸ್ಸಿಗೆ ತನು, ಮನ, ಧನದಿಂದ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ವೇದಿಕೆಯಲ್ಲಿ ರಾಜ್ಯದ ವಿವಿಧ ಭಾಗಗಳ ಸಮಾಜದ ಅಧ್ಯಕ್ಷರು, ಮುಖಂಡರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಯಾತ್ರಿ ನಿವಾಸ ನಿರ್ಮಾಣಕ್ಕೆ ಸಹಕಾರ ನೀಡಿದ ದಾನಿಗಳು ಮತ್ತು ವಿವಿಧ ಸಮಾಜಗಳ ಅಧ್ಯಕ್ಷರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

# ಅನುದಾನಿತ ಶಾಲೆಗಳ ಶಿಕ್ಷಕರಿಗೆ ಫಜಿತಿ ತಂದಿಟ್ಟ ಕಡ್ಡಾಯ ಎಸ್‌ಐಆರ್ ಕರ್ತವ್ಯ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಅನುದಾನಿತ ಶಾಲೆಗಳ ಶಿಕ್ಷಕರನ್ನು ಕಡ್ಡಾಯಗೊಳಿಸಿರುವುದರಿಂದ ಕೆಲವು ಶಾಲೆಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಖಾಸಗಿ ಶಾಲಾ ಸಂಘಟನೆಗಳು ಅಸಮಾಧಾನ ವ್ಯಕ್ತಪಡಿಸಿವೆ.**

ಬಿಇಒ ಹಾಗೂ ಚುನಾವಣಾ ಅಧಿಕಾರಿಗಳು ಅನುದಾನಿತ ಶಾಲೆಗಳ ಶಿಕ್ಷಕರು ಕಡ್ಡಾಯವಾಗಿ ಕಾರ್ಯದಲ್ಲಿ ಭಾಗವಹಿಸುವಂತೆ ಸೂಚನೆ ನೀಡಿದ್ದು, ಶಿಕ್ಷಕರನ್ನು ಕರ್ತವ್ಯಕ್ಕೆ ಕಳುಹಿಸದಿದ್ದರೆ ಎಫ್‌ಐಆರ್ ದಾಖಲಿಸುವುದು ಸೇರಿದಂತೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಲಾಗಿದೆ ಎಂದು ಶಾಲಾ ಆಡಳಿತ ಮಂಡಳಿಗಳು ಆರೋಪಿಸಿವೆ. ಇನ್ನೊಂದೆಡೆ, ಶಿಕ್ಷಣ ಇಲಾಖೆ ಶಾಲೆಗಳಲ್ಲಿ



ನಿಯಮಿತವಾಗಿ ತರಗತಿಗಳನ್ನು ನಡೆಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಈ ಎರಡು ಇಲಾಖೆಗಳ ವಿರುದ್ಧಾಭಾಸದ ಆದೇಶಗಳಿಂದ ಅನುದಾನಿತ ಶಾಲೆಗಳು ದಿಕ್ಕುತೋಚದ ಸ್ಥಿತಿಗೆ ತಲುಪಿವೆ ಎಂದು ಶಾಲಾ ಆಡಳಿತ ಮಂಡಳಿಗಳು ಹೇಳಿವೆ.

ಶಿಕ್ಷಕರನ್ನು ಚುನಾವಣಾ ಕರ್ತವ್ಯಕ್ಕೆ ಕಳುಹಿಸಿದರೆ ಶಾಲೆಗಳಲ್ಲಿ ಬೋಧನೆಗೆ ಅಡಚಣೆಯಾಗುತ್ತದೆ. ವಿದ್ಯಾರ್ಥಿಗಳ ಕಲಿಕೆಗೆ ಹಾನಿಯಾಗುವುದರ ಜೊತೆಗೆ ಪೋಷಕರಿಂದ ದೂರುಗಳು ಬರುತ್ತಿವೆ. ಮತ್ತೊಂದೆಡೆ ಶಿಕ್ಷಕರನ್ನು ಶಾಲೆಯಲ್ಲೇ ಉಳಿಸಿಕೊಂಡರೆ ಚುನಾವಣಾ ಅಧಿಕಾರಿಗಳು ಕಾನೂನು ಕ್ರಮದ ಬೆದರಿಕೆ ಹಾಕುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಅವರು, ಶಿಕ್ಷಣ ಇಲಾಖೆ ಮತ್ತು ಚುನಾವಣಾ ಇಲಾಖೆ ಪರಸ್ಪರ ಸಮನ್ವಯ ಸಾಧಿಸಿ ಶಾಲೆಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

# ಬೆಳಗಾವಿಯ ಆರ್‌ಎಸ್‌ಎಸ್ ಸಮಾವೇಶ ಖಾಸಗಿ ಕಾರ್ಯಕ್ರಮ, ಅನುಮತಿ ಅಗತ್ಯವಿಲ್ಲ :ಪ್ರಿಯಾಂಕ್ ಖರ್ಗೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಬೆಳಗಾವಿಯಲ್ಲಿ ಆರ್‌ಎಸ್‌ಎಸ್ ರಾಷ್ಟ್ರೀಯ ಪ್ರಾಂತ ಪ್ರಚಾರಕರ ಸಮಾವೇಶ ಖಾಸಗಿ ಕಾರ್ಯಕ್ರಮವಾಗಿದ್ದು, ಅದಕ್ಕೆ ಅನುಮತಿ ಪಡೆಯುವ ಅಗತ್ಯವಿಲ್ಲ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸ್ಪಷ್ಟಪಡಿಸಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದು ವೇಳೆ ಬೀದಿಗಿಳಿದು ಬೃಹತ್ ಮೆರವಣಿಗೆ ನಡೆಸುತ್ತೇವೆ ಎಂದಾದರೆ, ಆಗ ಅನುಮತಿ ಬೇಕಾಗುತ್ತದೆ. ಅವರು ಮನವಿ ಸಲ್ಲಿಸಬಹುದು, ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಆಧರಿಸಿ ಅನುಮತಿ ನೀಡಬೇಕೋ ಅಥವಾ ಕಾರ್ಯಕ್ರಮ ಮುಂದೂಡಿ ಎಂದು ಸಲಹೆ ನೀಡಬೇಕೋ ಎಂಬುದನ್ನು ನಿರ್ಧರಿಸುತ್ತೇವೆ ಎಂದರು. ಎಸ್‌ಐಆರ್ ಪ್ರಕ್ರಿಯೆ ಸರಿಯಿಲ್ಲ ಎಂದು ನಾವು ಕೂಡ ಮೊದಲಿನಿಂದಲೂ ಹೇಳುತ್ತಲೇ ಇದ್ದೇವೆ. ಈ ಬಗ್ಗೆ ಚರ್ಚೆ ಮಾಡಲು ಸರ್ಕಾರದ ಪ್ರತಿನಿಧಿಯಾಗಿ ಹೋಗಿದ್ದ ತಮಗೆ ಕೇಂದ್ರ ಚುನಾವಣಾ ಆಯೋಗ ಸಮಯ ನೀಡಲಿಲ್ಲ. ಆದರೆ ಬಿಜೆಪಿ–ಜೆಡಿಎಸ್‌ನವರು ಕೇಳಿದಾಕ್ಷಣ ಸ್ಪಂದಿಸಿದ್ದಾರೆ.

ಇದನ್ನು ನೋಡಿದರೆ ಚುನಾವಣಾ ಆಯೋಗ ಕೇಂದ್ರ ಸರ್ಕಾರದ ಕೈಗೊಂಬೆ ಎಂದು ಸ್ಪಷ್ಟವಾಗುವುದಿಲ್ಲವೇ? ಸರ್ಕಾರದ ಪ್ರಶ್ನೆಗಳಿಗೆ ಉತ್ತರಿಸದ ಆಯೋಗ, ವಿರೋಧ ಪ್ರಕ್ಷದ ಮನವಿಗೆ ಯಾವ ನಿರ್ಣಯ ಕೈಗೊಳ್ಳುತ್ತದೆ



ಎಂದು ಕಾದು ನೋಡುತ್ತೇವೆ ಎಂದರು. ದೂರು ನೀಡುವುದು, ನಂತರ ವ್ಯವಸ್ಥೆಯನ್ನೇ ಬದಲಾಯಿಸುವುದು ಬಿಜೆಪಿಯವರ ಸಾಮಾನ್ಯ ಕಾರ್ಯಸೂಚಿ. ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಆರಂಭವಾದಾಗ ಅಧಿಕಾರಿಗಳು ಮಮತಾ ಬ್ಯಾನರ್ಜಿ ಅವರ ಕೈಗೊಂಬೆ ಎಂದು ಪ್ರತಿಭಟನೆ ಮಾಡಿದರು. ಕೊನೆಗೆ ಲಾಜಿಕಲ್ ಡಿಸ್ಕ್ರಿಪೆನ್ಸಿ ಎಂಬ ವ್ಯವಸ್ಥೆ ತಂದು ಲಕ್ಷಾಂತರ ಮತದಾರರನ್ನು ಕಿತ್ತುಹಾಕಿದ್ದರು ಎಂದು ಹೇಳಿದರು.

ರಾಜ್ಯದ ಬರಪರಿಸ್ಥಿತಿಯ ಆಂತರಿಕ ಅಂದಾಜಿನ ಪ್ರಕಾರ 10 ಸಾವಿರ ಕೋಟಿ ರೂ. ನೆರವು ನೀಡುವಂತೆ, ಕೇಂದ್ರ ಸರ್ಕಾರಕ್ಕೆ ಮೌಖಿಕ ಮನವಿ ಸಲ್ಲಿಸಲಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಮಾರ್ ಅವರು, ವಿಭಾಗವಾರು ಸಭೆ ನಡೆಸಿ, ವಾಸ್ತವತೆಯ ಆಧಾರದ ಮೇಲೆ ವರದಿ ಸಿದ್ಧಪಡಿಸಲು ಅಧಿಕಾರಿಗಳಿಗೆ ಸೂಚಿಸುತ್ತಿದ್ದಾರೆ. ರಾಜ್ಯ ಸರ್ಕಾರ ಕೇಂದ್ರಕ್ಕೆ ವರದಿ ನೀಡಲಿದೆ. ಬರ ಘೋಷಣೆ ನಮ ಕೈಯಲ್ಲಿಲ್ಲ. ಅದು ಕೇಂದ್ರ ಸರ್ಕಾರದ ಜವಾಬ್ದಾರಿ ಎಂದು ಹೇಳಿದರು. ಕರ್ನಾಟಕದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಕಾರ್ಯನಿರ್ವಹಣೆ ಬಗ್ಗೆ ಕೇಂದ್ರ ಸರ್ಕಾರ ಮೆಚ್ಚುಗೆ ವ್ಯಕ್ತಪಡಿಸಿದೆ.

ಪ್ರಿಯಾಂಕ್ ಖರ್ಗೆ ಕೆಲಸ ಮಾಡುವುದಿಲ್ಲ ಎಂದು ಹೇಳುತ್ತಿದ್ದ ಬಿಜೆಪಿಯವರು ಕೇಂದ್ರದ ವರದಿಯನ್ನು ಬಿಜೆಪಿಯವರು ಕಣ್ಣುತೆರೆದು ನೋಡಲಿ, ಹಿಂದೆ ಆಕ್ಸಫರ್ಡ್ ವಿಶ್ವವಿದ್ಯಾಲಯ ಗ್ಯಾರಂಟಿ ಯೋಜನೆಗಳ ಕುರಿತು ಸಕಾರಾತಕ ವರದಿ ನೀಡಿದಾಗ ಬಿಜೆಪಿಯವರು, ವ್ಯಂಗ್ಯದ ಮಾತುಗಳನ್ನಾಡಿದ್ದರು. ಈಗ ಅವರದೇ ಪಕ್ಷದ ಕೇಂದ್ರ ಸರ್ಕಾರವೇ ಗ್ಯಾರಂಟಿಗಳನ್ನು ಕೊಂಡಾಡಿದೆ. ಅಷ್ಟೇ ಅಲ್ಲದೇ ಜಲಜೀವನ್ ಅನುಷ್ಠಾನದಲ್ಲಿ ಕರ್ನಾಟಕ ದೇಶದಲ್ಲೇ ಮೂರನೇ ಸ್ಥಾನದಲ್ಲಿದೆ. ಗ್ರಾಮ ಪಂಚಾಯಿತಿಗಳಲ್ಲಿ ಹಣ ಬಳಕೆ, ತೆರಿಗೆ ಸಂಗ್ರಹದಲ್ಲೂ ನಾವು ಮೊದಲಿಗರಾಗಿದ್ದೇವೆ. ಹಿಂದೆ ಟೀಕೆ ಮಾಡಿದವರು ಈಗ ಬಂದು ಸನಾನ ಮಾಡಲಿ, ತಾವು ಸಮಯ ನೀಡುತ್ತೇವೆ ಎಂದರು.

ಚನ್ನಪಟ್ಟಣದ ತಹಶೀಲ್ದಾರ್ ಅವರನ್ನು ಬ್ಲಾಕ್ ಮೇಲ್ ಮಾಡಿರುವ ಪ್ರಕರಣ ಈಗಷ್ಟೇ ತಮ ಗಮನಕ್ಕೆ ಬಂದಿದೆ. ಸತ್ಯಾಸತ್ಯತೆ ಪರಿಶೀಲಿಸುತ್ತಿದ್ದೇವೆ ಎಂದರು.ಹುಣಸೂರು ಶಾಸಕ ಹರೀಶ್‌ಗೌಡ ಅವರ ಪತ್ನಿ ವಿರುದ್ಧವಾಗಿ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಟೀಕೆ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಪ್ರಕರಣ ದಾಖಲಿಸಲಾಗುತ್ತದೆ. ಇದರಲ್ಲಿ ಯಾವುದೇ ಮುಲಾಜಿ ಇಲ್ಲ. ಆದರೆ ಸೆಲೆಬ್ರಿಟಿ ಮಹಿಳೆಯರ ವಿರುದ್ಧ ಕ್ರಮ ಕೈಗೊಂತೆ ತಮ ಪ್ರಕರಣದಲ್ಲೂ ತುರ್ತು ಕ್ರಮಗಳಾಗಬೇಕೆಂದು ದೂರುದಾರರು ಹೇಳಿರುವುದು ತಮ ಗಮನಕ್ಕೆ ಬಂದಿದೆ. ಯಾವುದೇ ಪ್ರಕರಣವಾದರೂ ಪರಿಶೀಲನೆ ಮಾಡಬೇಕು. ಅದಕ್ಕೆ ಸಮಯಾವಕಾಶ ಹಿಡಿಯುತ್ತದೆ. ಈ ಪ್ರಕರಣದಲ್ಲೂ ಅದೇ ರೀತಿಯಾಗುತ್ತದೆ ಎಂದು ಹೇಳಿದರು.

ಅಯೋಧ್ಯೆಯಲ್ಲಿ ನಡೆದಿರುವ ಚಂದಾ ಚೋರಿ ಪ್ರಕರಣಕ್ಕೂ ಕಾಂಗ್ರೆಸ್ ಪಕ್ಷವೇ ಉತ್ತರ ನೀಡಬೇಕು ಎಂಬಂತೆ ಬಿಜೆಪಿಯವರು ಮಾತನಾಡುತ್ತಾರೆ. ರಾಮಮಂದಿರ ವಿಚಾರವಾಗಿ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟವಾದಾಗ, ಪ್ರಾಣ ಪ್ರತಿಷ್ಠಾಪನೆ, ಅಡಿಗಲ್ಲು ಹಾಕುವುದು ಸೇರಿದಂತೆ ಎಲ್ಲಾ ಸಂದರ್ಭದಲ್ಲೂ ಪ್ರಧಾನಿಯವರೇ ಕ್ರೆಡಿಟ್ ತೆಗೆದುಕೊಂಡರು. ಈಗ ದೇಣಿಗೆ ಹಣ ಲೂಟಿಯಾದಾಗ ಕಾಂಗ್ರೆಸ್ ಮಾತನಾಡಬೇಕೆಂದು ಬಯಸುತ್ತಾರೆ. ಚಾಯಿ ಪೇ ಚರ್ಚೆ ಮಾಡಿರುವ ಪ್ರಧಾನಿಯವರು, ಚಂದಾಪೇ ಚರ್ಚೆ ಮಾಡಲಿ. ಉತ್ತರಿಸಲಾಗದಂತಹ ಕಠಿಣ ಪ್ರಶ್ನೆಗಳು ಎದುರಾದಾಗ ಪ್ರಧಾನಿ ದೇಶದಲ್ಲಿ ಇರದೇ, ವಿದೇಶ ಪ್ರವಾಸ ಕೈಗೊಳ್ಳುತ್ತಾರೆ.

ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ, ನೀಟ್ ಅಕ್ರಮಗಳಂತಹ ಸಂದರ್ಭದಲ್ಲಿ ಪ್ರಧಾನಿಯವರ ಕಾರ್ಯಕ್ರಮಗಳು ನೋಡಿದರೆ ಗೊತ್ತಾಗುತ್ತದೆ ಎಂದರು. ರಾಮಮಂದಿರ ಹುಂಡಿ ಲೂಟಿಯ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು ಉತ್ತರ ಪ್ರದೇಶದ ಮುಖ್ಯಮಂತ್ರಿಯವರ ಅಧೀನದಲ್ಲಿದ್ದಾರೆ. ಇದರಿಂದ ನ್ಯಾಯ ಸಿಗುತ್ತದೆ, ಸರಿಯಾದ ತನಿಖೆಯಾಗುತ್ತದೆ ಎಂದು ಅನಿಸುವುದಿಲ್ಲ ಎಂದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101